April-May 95

ಮಾನಸಿ

ತಿಂಗಳ ಪತ್ರಿಕೆ ಏಪ್ರಿಲ್-ಮೇ 1995

ವಿಶೇಷ ಸಂಚಿಕೆ

- ವರದಕ್ಷಿಣೆ ಲೆಕ್ಕಾಚಾರಗಳು
- ಚಿಪ್ಕೊ ಮಹಿಳೆಯರ ದೃಷ್ಟಿಯಲ್ಲಿ ಸ್ವಾತಂತ್ರ್ಯ
- ಮಹಿಳಾ ಚಳುವಳಿಯ ಲಯ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 2

ಏಪ್ರಿಲ್-ಮೇ - 1995

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ಸಹ ಸಂಪಾದಕರು :

ವನಜಾ ವೆಂ.
ಡಾ॥ ಪ್ರಭಾವತಿ ಎಸ್. ವಿ.

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸಂಪರ್ಕ ವಿಳಾಸ

ನಂ. 457, 12ನೇ ಅಡ್ಡರಸ್ತೆ,
ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತ
ಮಹಾಲಕ್ಷ್ಮಿಪುರ, ಬೆಂಗಳೂರು–560 086

ಸೂಚನೆ : ಬಿಡಿ ಪ್ರತಿ : **3-00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಈ ಸಂಚಿಕೆಯಿಂದ ಕೆಲವರು ನಮ್ಮೊಡನೆ ಕೆಲಸ ಮಾಡಲು ಒಪ್ಪಿರುತ್ತಾರೆ. ಅವರನ್ನು 'ಮಾನಸ' ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಆಧುನಿಕ ತಾಂತ್ರಿಕತೆ ಎಲ್ಲಿ ಯಾರ್ಯಾರನ್ನು, ಹೇಗೆ ಬಲಿ ತೆಗೆದುಕೊಳ್ಳುತ್ತದೆ ಎಂಬುದು ಆ ಕ್ಷಣವೇ ಅರ್ಥವಾಗದ ವಿಚಾರ. ಅಭಿವೃದ್ಧಿ, ಆರೋಗ್ಯ, ಪ್ರಗತಿಪರತೆ ಇಂತಹ ಅನೇಕ ಮುಖವಾಡಗಳನ್ನು ಧರಿಸಿ ಬರುವ ಈ ತಾಂತ್ರಿಕತೆ ಒಂದು ರೀತಿಯ ಸ್ಲೋ–ಪಾಯಿಸನ್ ರೀತಿಯದು. ಹೀಗೆ ಒಡಲಲ್ಲಿ ಏನೋ ವಿಷಪೂರಿತ ಲೇಪನಗಳನ್ನು ಧರಿಸಿಕೊಂಡು, ದುರುದ್ದೇಶದ ಯಾವುದೋ ಅಂಶಗಳನ್ನು ಒಳಗೊಂಡೇ ತಾಂತ್ರಿಕತೆ ಹುಟ್ಟಿಕೊಂಡಿರುತ್ತವೆ ಎಂಬ ಅನುಮಾನ ಪ್ರಾರಂಭವಾದೊಡನೆಯೇ ಹೊಸ ಹೊಸ ತಾಂತ್ರಿಕ ಶೋಧನೆ, ವೈಜ್ಞಾನಿಕ ಶೋಧನೆಗಳ ಬಗ್ಗೆ ನಾವು ಗುಮಾನಿಯಿಂದಲೇ ನೋಡಬೇಕಾಗುತ್ತದೆ.

ಬಂಡವಾಳಶಾಹಿತ್ವ, ಪಿತೃಪ್ರಧಾನ ಮೌಲ್ಯಗಳ ಅಡಿಯಲ್ಲಿ ಹುಟ್ಟಿಕೊಂಡ ಕುಟುಂಬಯೋಜನೆಯ ವಿಧಾನಗಳು ಮಹಿಳೆಯರಿಗೆ ಹೇಗೆ ವಿರೋಧವಾಗಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಚೈನಾದಲ್ಲಿ ಈಗ ಮತ್ತೊಂದು ಅಂಶ ಬೆಳಕಿಗೆ ಬಂದಿದೆ. ಗರ್ಭಪಾತವಾದಾಗ ಈಚೆ ಬರುವ ಭ್ರೂಣಗಳು–ಕಿಡ್ನಿಗೆ, ಮುಖದ ಕಳೆಗೆ, ಹಾಗೂ ಆರೋಗ್ಯಕ್ಕೆ ಒಳ್ಳೆಯದು ಎಂಬ ದೃಷ್ಟಿಯಿಂದ ಆ ಭ್ರೂಣಗಳನ್ನು ಬಿಸಾಡದೇ ಸೂಪ್ ಮಾಡಿ ತಿನ್ನಬೇಕು ಎಂಬುದು. ಚೈನಾದ ಮಹಿಳಾ ವೈದ್ಯೆಯೋರ್ವಳು, ಆಗಲೇ ನೂರು ಭ್ರೂಣಗಳನ್ನು ಸೂಪ್ ಮಾಡಿ ತಿಂದಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಹಾಗೂ ಚಿಕ್ಕವಯಸ್ಸಿನ ಹೆಂಗಸರು ಮಾಡಿಸುವ ಗರ್ಭಪಾತದಿಂದ ಬರುವ ಭ್ರೂಣಗಳು ದೇಹಕ್ಕೆ ಅತ್ಯಂತ ಆರೋಗ್ಯಕರ, ಅವುಗಳನ್ನು ಬಿಸಾಡದೇ ತಿನ್ನಬೇಕು ಎಂದೂ ಕೂಡಾ ಆಕೆ ಬೋಧಿಸುತ್ತಾರೆ. ಈ ಅಂಶ ಬೆಳಕಿಗೆ ಬಂದ ಕೂಡಲೇ ಮಹಿಳೆಯರನ್ನು ಕಿಡ್ನಿಗಾಗಿ, ಮುಖದ ಹೊಳಪಿಗಾಗಿ, ಆರೋಗ್ಯದ ಕಾರಣಕ್ಕಾಗಿ ಗರ್ಭಪಾತ ಮಾಡಿಸುವಂತಹ ಒಂದು ಒತ್ತಾಯದ ಸನ್ನಿವೇಶ ರೂಪುಗೊಂಡುಬಿಡುವ ಸಾಧ್ಯತೆ ಇದೆ ಎಂಬುದು ನಮ್ಮನ್ನು ದಿಗಿಲುಪಡಿಸುವಂತಹ ವಿಚಾರ.

ನಲವತ್ತು ಮೀರಿದ ಅಂದರೆ ಋತುಚಕ್ರ ನಿಂತ ಹೆಂಗಸಿನ ದೇಹದ ಹಾರ್ಮೋನುಗಳು ಹೃದಯಾಘಾತ ತಡೆಯುವಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತವೆ ಎಂಬ ಶೋಧನೆಯೂ ಸಹ ಹೆಂಗಸರಿಗೆ ವಿರೋಧವಾಗಿಯೇ ಪ್ರಾಕ್ಟೀಸ್ ಆಗಿಬಿಡುವ ಸಾಧ್ಯತೆ ಕೂಡಾ ಇದೆ. ಆರೋಗ್ಯಕ್ಕೆ ಇಂತಿಂತಹ ವಸ್ತುಗಳು ಮುಖ್ಯ ಎಂಬ ಶೋಧನೆ ಈಚೆ ಬಂದೊಡನೆಯೇ ಬಂಡವಾಳಶಾಹಿ ರಾಷ್ಟ್ರಗಳ ಜೊತೆಗೆ ಪಿತೃಪ್ರಧಾನ ಮೌಲ್ಯಗಳೂ ಅವುಗಳನ್ನು ಬಳಸಿಕೊಂಡು ಹಣ ಮಾಡಲು ಮುಗಿಬೀಳತೊಡಗುತ್ತವೆ. ಅವುಗಳಿಗೆ ಬಲಿಪಶುವಾಗುವ ಪ್ರಾಣಿಗಳ ಜೊತೆಗೆ ಈಗ ಹೆಂಗಸು ಕೂಡಾ ಸೇರಿಬಿಡುತ್ತಾಳೆ. ಇಂತಹ ವೈಜ್ಞಾನಿಕ ಶೋಧನೆಗಳು ಹೆಂಗಸರಿಗೆ ಮಾರಕವಾಗಿ ಬಿಡುವ ವಿಧಾನಗಳ ಬಗ್ಗೆ ಯೋಚಿಸಿ, ಇಂತಹವುಗಳ ಬಗ್ಗೆ ನಾವು ಎಚ್ಚರಿಕೆಯಿಂದಲೇ ಒಂದು ನಿಲುವನ್ನು ತೆಗೆದುಕೊಳ್ಳುವುದು ಅಗತ್ಯವಾಗುತ್ತದೆ.

ವರದಕ್ಷಿಣೆ ಲೆಕ್ಕಾಚಾರಗಳು

ತವರು ಮನೆಯಲ್ಲಿ ಮಗಳ ಹಕ್ಕುಗಳು

ಕಳೆದ ಶತಮಾನದಲ್ಲಿ ಭಾರತದಲ್ಲಿ ಸಾಮಾಜಿಕವಾಗಿ ಪ್ರಬಲರಾದ ನಗರದ ಶಿಕ್ಷಣಹೊಂದಿದ ಮಧ್ಯಮವರ್ಗದ ಜನರಲ್ಲಿ ವರದಕ್ಷಿಣೆ ಪದ್ಧತಿಯು ಒಂದು ದೊಡ್ಡ ಟೀಕೆಗೆ ಒಳಪಟ್ಟಿತು, ಮತ್ತು ಮಹಿಳೆಯರ ಮೇಲೆ ನಡೆಯುವ ದಬ್ಬಾಳಿಕೆಗಳಲ್ಲಿ ಇದು ಒಂದು ಮುಖ್ಯ ಮಗ್ಗಲು ಎಂದು ಗುರುತಿಸಲ್ಪಟ್ಟಿತು. ಹೆಣ್ಣುಮಕ್ಕಳಿಗೆ ಕೊಡಬೇಕಾಗುವ ವರದಕ್ಷಿಣೆಯ ಒತ್ತಡವೇ ಅವರನ್ನು ಕುಟುಂಬಕ್ಕೆ ಹೊರೆ ಮತ್ತು ಬೇಡದವರನ್ನಾಗಿ ಮಾಡುತ್ತದೆ ಎಂಬ ಅಂಶವೇ ತಮ್ಮ ಟೀಕೆಗೆ ಆಧಾರವೆಂದು ವರದಕ್ಷಿಣೆ ವಿರೋಧಿಗಳು ಹೇಳುತ್ತಾರೆ. ವರದಕ್ಷಿಣೆಯು ತಂದೆ ತಾಯಿಗಳಿಗೆ ಆರ್ಥಿಕ ಹೊರೆಯಾಗುವುದರಿಂದ ಅದನ್ನು ಖಂಡಿಸಿದರೂ, ವರದಕ್ಷಿಣೆ ವಿರೋಧಿಗಳು ಆರ್ಥಿಕ ಲೆಕ್ಕಾಚಾರದ ಆಧಾರದ ಮೇಲೆ ವರದಕ್ಷಿಣೆಯನ್ನು ಟೀಕೆ ಮಾಡುವುದು ಅಪರೂಪ. ಆದುದರಿಂದ ಈ ಲೇಖನವು ಅಂತಹ ಲೆಕ್ಕಾಚಾರಗಳಿಗೆ ಹೆಚ್ಚಿನ ಗಮನ ನೀಡಿ ಅಷ್ಟೇ ಮುಖ್ಯವಾದ ವರದಕ್ಷಿಣೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳನ್ನು ನಿರ್ಲಕ್ಷಿಸುತ್ತದೆ.

ಭಾರತದ ಮದುವೆಗಳಲ್ಲಿ ವರದಕ್ಷಿಣೆಯ ಪಾತ್ರವನ್ನು ವಿವರವಾಗಿ ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಲ್ಲ. ವರದಕ್ಷಿಣೆಯನ್ನು ಕಟುವಾಗಿ ಟೀಕಿಸುವ ನಗರದ ಮಧ್ಯಮ ಮತ್ತು ಮೇಲುವರ್ಗದ ಕುಟುಂಬಗಳಲ್ಲಿನ ವರದಕ್ಷಿಣೆಗೆ ಮಾತ್ರ ನನ್ನ ವಿಶ್ಲೇಷಣೆಯನ್ನು ಉದ್ದೇಶಪೂರ್ವಕವಾಗಿ ಮಿತಿಗೊಳಿಸಿದ್ದೇನೆ. ವರದಕ್ಷಿಣೆ ಪ್ರಮಾಣವನ್ನು ನಿಶ್ಚಯಿಸುವವರು ಅವರು. ಅದು ಒಂದು ಸಾಮಾಜಿಕ ಪಿಡುಗು ಎಂದು ನಿಂದಿಸುತ್ತಾ ಬಂದಿರುವವರು ಅವರೇ.

ಮಗಳು ತಂದೆ ಮನೆಯಿಂದ ಮಾವನ ಮನೆಗೆ ಸಂಪತ್ತನ್ನು ತೆಗೆದುಕೊಂಡು ಹೋಗುವುದರಿಂದ ಗಂಡನ ಮನೆಯಲ್ಲಿ ಅವಳ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಬದಲಾಗಿ ಅವಳ ದುಃಖಕ್ಕೆ ಮೂಲವಾಗಿದೆ. ಅನೇಕ ಸಮಾಜಗಳಲ್ಲಿ ಮಹಿಳೆಯರ ಜೀವನವನ್ನು ಹಾಳು ಮಾಡುವುದಿಲ್ಲ. ಆದರೆ ಭಾರತದಲ್ಲಿ ವರದಕ್ಷಿಣೆ ಕೊಡುವಲ್ಲಿ ಉಂಟಾಗುವ ಜಗಳ ಎರಡು ಕುಟುಂಬಗಳ ಕಲಹಕ್ಕೆ ಕಾರಣವಾಗುತ್ತದೆ ಮತ್ತು ಈ ವರದಕ್ಷಿಣೆ ಬೇಡಿಕೆಗಳನ್ನು ಹೆಣ್ಣುಮಕ್ಕಳು ಹೊರೆಯೆಂದೇ ಪರಿಗಣಿಸಲು ಮತ್ತೊಂದು ಕಾರಣವನ್ನಾಗಿ ಉಪಯೋಗಿಸಲಾಗುತ್ತದೆ. ಹೆಣ್ಣು ಶಿಶುಹತ್ಯೆ ಮತ್ತು ಆಮ್ನಿಯೋಸಿಂತನಿಸ್ ನಂತರ ಹೆಚ್ಚುತ್ತಿರುವ ಸ್ತ್ರೀಭ್ರೂಣ ಗರ್ಭಪಾತವೂ ಸೇರಿದಂತೆ ಹೆಣ್ಣುಮಕ್ಕಳ ಮೇಲೆ ನಡೆಯುವ ಎಲ್ಲಾ ರೀತಿಯ ಹಿಂಸೆಗಳಿಗೆ ಮಗಳು ಪ್ರತಿನಿಧಿಸುವ ವರದಕ್ಷಿಣೆಯ ಆರ್ಥಿಕ ಹೊರೆಯೇ ಕಾರಣ ಎಂದು ಆರೋಪಿಸಲಾಗಿದೆ.

ಅದೇನೆ ಇರಲಿ ವರದಕ್ಷಿಣೆಯು ಮಹಿಳೆಯರ ಅಪಮೌಲ್ಯಕ್ಕೆ ಮತ್ತು ತುಳಿತಕ್ಕೆ ಕಾರಣವಲ್ಲ. ವರದಕ್ಷಿಣೆಯಷ್ಟೇ ಹೆಣ್ಣುಮಕ್ಕಳನ್ನು ತಂದೆತಾಯಿಗಳಿಗೆ ಹೊರೆಯನ್ನಾಗಿ ಪರಿವರ್ತಿಸುವುದಿಲ್ಲ. ಗಂಡುಮಕ್ಕಳಿಗೆ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಲಕ್ಷಗಟ್ಟಲೆ ಹಣ ನೀಡುವಂತ ಅಥವಾ ಅವರಿಗೋಸ್ಕರ ವ್ಯವಹಾರದಲ್ಲಿ ಬಂಡವಾಳವನ್ನು ಸಂತೋಷದಿಂದ ಹೂಡುವಂತ ತಂದೆ ತಾಯಿಗಳು ಗಂಡುಮಕ್ಕಳು 'ಬಾರವಾದವರು' ಎಂದು ಯೋಚಿಸುವುದಿಲ್ಲ. ಕೇವಲ ವರದಕ್ಷಿಣೆ ಹೆಣ್ಣುಮಕ್ಕಳನ್ನು 'ಭಾರದವರನ್ನಾಗಿ' ಮಾಡುತ್ತದೆ, ಏಕೆಂದರೆ ಮೊದಲಿನಿಂದಲೂ ಅವರು ಬೇಡದವರಾಗಿರುತ್ತಾರೆ.

ನಮ್ಮ ದೇಶದಲ್ಲಿ ಒಂದು ವಿಶಿಷ್ಟ ರೂಪ ಹೊಂದಿರುವ ವರದಕ್ಷಿಣೆ ಮತ್ತು ಹುಡುಗ ಹುಡುಗಿಯ ಕುಟುಂಬಗಳ ನಡುವಿನ ಕೆಟ್ಟ ಜಗಳ ಇವು ಮಹಿಳೆಯರ ದುರ್ಬಲತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಅವು ಅವಳ ದುರ್ಬಲತೆಗೆ ಕಾರಣವಲ್ಲದಿದ್ದರೂ ತವರು ಮನೆಯಲ್ಲಿ ಅವಳ ಹಕ್ಕುಗಳು ದುರ್ಬಲವಾದವು ಎಂಬುದನ್ನು ಸೂಚಿಸುತ್ತದೆ. ಇತ್ತೀಚಿನ ದಶಕಗಳಲ್ಲಿ ವರದಕ್ಷಿಣೆ ಹೆಚ್ಚು ಹೆಚ್ಚು ದುಬಾರಿಯಾದಂತೆ ಹೆಣ್ಣುಮಕ್ಕಳು ಆರ್ಥಿಕ ಹೊರೆ ಎನ್ನುವ ನಂಬಿಕೆ ಮೊದಲಿಗಿಂತ ಪ್ರಬಲವಾಗುತ್ತಿದೆ. ಮಹಿಳೆಯರನ್ನು ತುಳಿತದಿಂದ

ಸ್ವಲ್ಪ ಮಟ್ಟಿಗೆ ರಕ್ಷಿಸುವಂಥ ವರದಕ್ಷಿಣೆ ವಿರೋಧಿ ಚಳುವಳಿ ತಾನು ಪುನಃ ಪುನಃ ಹೇಳುವ 'ವರದಕ್ಷಿಣೆ ರದ್ದುಪಡಿಸಿ' ಎಂಬ ಮಂತ್ರಕ್ಕೆ ತನ್ನನ್ನು ಮಿತಿಗೊಳಿಸಿರುವುದು. ಹೆಣ್ಣುಮಕ್ಕಳು ಆರ್ಥಿಕ ಹೊರೆ ಎಂಬ ಸಾಂಪ್ರದಾಯಿಕ ನಂಬಿಕೆಗೆ ಇನ್ನು ಹೆಚ್ಚಿನ ನ್ಯಾಯ ಸಮ್ಮತಿ ಸಿಗಲು ಸಹಾಯ ಮಾಡಿದೆ.

ವರದಕ್ಷಿಣೆ ಸ್ತ್ರೀಧನ

ವರದಕ್ಷಿಣೆಯನ್ನು ಸಮರ್ಥಿಸುವವರು ಅದು ಹೆಣ್ಣು ಮಕ್ಕಳು ಮದುವೆಗೆ ಮುಂಚೆ ಪಡೆಯುವ ಅನುವಂಶಿಕ ಹಕ್ಕುಬಾಧ್ಯತೆಯ (inheritence) ಒಂದು ರೂಪ ಎಂದು ನೋಡುವ ಒಂದು ಸಂಪ್ರದಾಯ ಎಂದು ಹೇಳುತ್ತಾರೆ. ಈ ಅರ್ಥವಿವರಣೆಯ ಪ್ರಕಾರ ಹೆಣ್ಣುಮಕ್ಕಳು ಗಂಡು ಮಕ್ಕಳ ಹಾಗೆ ಆಸ್ತಿಯಲ್ಲಿ ಪಾಲು ಪಡೆಯಲು ತಂದೆ ಸಾಯುವವರೆಗೆ ಕಾಯಬೇಕಾಗಿಲ್ಲ. ಬದಲಿಗೆ ಮದುವೆ ಸಮಯದಲ್ಲಿ ತಮ್ಮ ಪಾಲನ್ನು ಪಡೆಯುತ್ತಾರೆ, ಹಿಂದೂ ಧರ್ಮಶಾಸ್ತ್ರ ಕೂಡ ವರದಕ್ಷಿಣೆಯು ಸ್ತ್ರೀಧನಕ್ಕೆ ಸಮನಾದುದು ಎಂದು ಹೇಳುತ್ತದೆ.

ಆದರೆ ಈಗ ಕೊಡುತ್ತಿರುವ ವರದಕ್ಷಿಣೆಗೂ ಮತ್ತು ಸ್ತ್ರೀಧನಕ್ಕೂ ಅಗಾಧವಾದ ವ್ಯತ್ಯಾಸವಿದೆ ಪಾರಂಪರಿಕವಾಗಿ ಸ್ತ್ರೀಧನವು ಬೇರೆಯವರಿಗೆ ವರ್ಗಾಯಿಸಲು ಸಾಧ್ಯವಾಗದ ಮಹಿಳೆಯದೇ ಆಸ್ತಿಯಾಗಿತ್ತು ಮತ್ತು ಅದರ ಮೇಲೆ ಅವಳಿಗೆ ಸಂಪೂರ್ಣ ಅಧಿಕಾರವಿರುತ್ತಿತ್ತು. ಸ್ತ್ರೀಧನವು ತಾಯಿಂದ ಮಗಳಿಗೆ ಬರುವಂತದ್ದಾಗಿತ್ತು. ಇತರ ಆಸ್ತಿಗಳಂತೆ ಗಂಡು ಸಂತಾನಕ್ಕೆ ಹೋಗುತ್ತಿರಲಿಲ್ಲ. ಈಗಿನ ವರದಕ್ಷಿಣೆಯನ್ನು ಮಹಿಳೆಯ ಸ್ವಂತದ್ದು ಅಥವಾ ಅನುವಂಶಿಕ ಹಕ್ಕುಬಾಧ್ಯತೆಯಿಂದ ಬಂದದ್ದು ಎಂದು ಪರಿಗಣಿಸುವುದು ತುಂಬ ಅಪರೂಪ. ಹೆಣ್ಣು ಮಕ್ಕಳು ಹೆಚ್ಚು ಹೆಚ್ಚು ಉಡುಗೊರೆಗಳನ್ನು ಪಡೆದುಕೊಂಡರೂ ಅವುಗಳ ಮೇಲೆ ಅವರಿಗೆ ಯಾವುದೇ ಖಚಿತವಾದ ಹಕ್ಕುಗಳು ಇರುವುದಿಲ್ಲ. ಹುಡುಗಿಯನ್ನು ತಮ್ಮ ಮನೆಗೆ ತಂದುಕೊಂಡಿದ್ದಕ್ಕೆ ಮತ್ತು ತವರು ಮನೆಯ ಭಾರವನ್ನು ಇಳಿಸಿದ್ದಕ್ಕಾಗಿ ವರನ ಮನೆಯವರಿಗೆ ಕೃತಜ್ಞತಾಪೂರ್ವಕವಾಗಿ ಉಡುಗೊರೆಗಳನ್ನು ನೀಡಬೇಕಾಗುತ್ತದೆ. ವಧುವು ತಾನು ವರದಕ್ಷಿಣೆ ರೂಪದಲ್ಲಿ ತಂದ ಕೆಲವು ಒಡವೆ ಬಟ್ಟೆ ಮುಂತಾದ ಅವಳ ಸ್ವಂತ ಬಳಕೆ ವಸ್ತುಗಳ ಮೇಲೆ ಸ್ವಲ್ಪ ಹಕ್ಕನ್ನು ಪಡೆಯಬಹುದು ಎಂಬ ತೋರಿಕೆಯ ತಿಳುವಳಿಕೆ ಕಂಡುಬಂದರೂ ವಾಸ್ತವದಲ್ಲಿ ಅವಳಿಗೆ ಅವುಗಳ ಮೇಲೆ ಹಕ್ಕಿರುವುದಿಲ್ಲ.

ಆದರೆ ಇದು ವರದಕ್ಷಿಣೆಯ ಒಂದು ಭಾಗವಷ್ಟೆ, ಇನ್ನೊಂದು ಭಾಗ ವರನಿಗೆ ಮತ್ತು ಅವನ ಕುಟುಂಬಕ್ಕೆ ಸೇರುತ್ತದೆ. ನಗದು ಮತ್ತು ಮುಖ್ಯ ವಸ್ತುಗಳಾದ ಮೋಟಾರು ಮುಂತಾದವುಗಳನ್ನು ನೇರವಾಗಿ ವರನ ತಂದೆಗೆ ಅಥವಾ ವರನಿಗೆ ನೀಡಲಾಗುತ್ತದೆ. ಈ ಉಡುಗೊರೆಗಳು ಹುಡುಗನ ಮನೆಗೆ ಮತ್ತು ಹುಡುಗ ಅಂತಸ್ತಿಗೆ ತಕ್ಕಂತೆ ಇರಬೇಕು ಎಂದು ನಿರೀಕ್ಷಿರುತ್ತಾರೆ. ಹುಡುಗನ ಮನೆಯವರು ಕಡಿಮೆ ವರದಕ್ಷಿಣೆ ಪಡೆಯುವುದು ಅವಮಾನವೆಂದು ಭಾವಿಸುತ್ತಾರೆ. ಎಷ್ಟೋ ಸಮಯಗಳಲ್ಲಿ ಈ ರೀತಿಯ ವರದಕ್ಷಿಣೆಗಳೇ ಎರಡು ಕಟುಂಬಗಳ ಜಗಳಕ್ಕೆ ಕಾರಣವಾಗುತ್ತದೆ.

ವರದಕ್ಷಿಣೆಯನ್ನು ನಿಷೇಧಿಸುವ 'ವರದಕ್ಷಿಣೆ ನಿಷೇಧ ಕಾಯಿದೆ' ಮದುವೆ ಮುರಿದು ಹೋದ ಸಂದರ್ಭದಲ್ಲಿ, ವರದಕ್ಷಿಣೆಯನ್ನು ಸ್ತ್ರೀಧನವೆಂದು ಪರಿಗಣಿಸಿ ಅದನ್ನು ಹಿಂದಿರುಗಿಸಲು ಅವಕಾಶ ಮಾಡಿಕೊಡುತ್ತದೆ. ಹಾಗಿದ್ದರೂ ನಿಜಸ್ಥಿತಿಯಲ್ಲಿ ವರನಿಗೆ ಮತ್ತು ಅವನ ಕುಟುಂಬಕ್ಕೆ ನೀಡಿರುವುದು ಬೇಷರತ್ ಕಾಣಿಕೆಯೆಂದು ಪರಿಗಣಿಸಲ್ಪಟ್ಟು, ವರದಕ್ಷಿಣೆ ಹಿಂದಿರುಗಿಸುವ ವಿಷಯವು ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ.

ಹೊರೆಯಾದ ಹೆಣ್ಣುಮಕ್ಕಳು

ಸ್ತ್ರೀಧನವೇ ವರದಕ್ಷಿಣೆಯಾಗಿ ಪರಿವರ್ತನೆಗೊಂಡಿತು ಎಂದು ತೋರಿಸಲು ಈವರೆಗೆ ಯಾವುದೇ ಐತಿಹಾಸಿಕ ಸಂಶೋಧನೆ ನಡೆದಿಲ್ಲ. ಎರಡು ಕುಟುಂಬಗಳ ನಾಶಕ್ಕೆ ಕಾರಣವಾಗುವ ದುಬಾರಿ ವರದಕ್ಷಿಣೆಯ ಪ್ರಸ್ತಾಪವೇ ಬ್ರಿಟಿಷ್ ಪೂರ್ವ ಸಾಹಿತ್ಯದಲ್ಲಿ ಇರಲಿಲ್ಲ ಮತ್ತು ಈ ದುಬಾರಿ ವರದಕ್ಷಿಣೆಯಿಂದುಂಟಾಗುವ ಹಾನಿಯೇ ಹತ್ತೊಂಬತ್ತನೆ ಶತಮಾನದ ಸಾಹಿತ್ಯದ ಮುಖ್ಯ ವಸ್ತುವಾಗಿತ್ತು ಎಂದು ನಮಗೆಲ್ಲ ತಿಳಿದಿದೆ. ವಸಾಹತುಗಾರರು ಭಾರತದಲ್ಲಿ ಕೈಗೊಂಡ ಭೂ ನಿರ್ಣಯ ಕಾರ್ಯವಿಧಾನದಿಂದನೆ, ಈ ಅವಧಿಯಲ್ಲಿ ಸ್ತ್ರೀಯರು ಅಧಿಕ ಪ್ರಮಾಣದಲ್ಲಿ ತಮ್ಮ ಆರ್ಥಿಕ ಪ್ರಾಮುಖ್ಯತೆ ಮತ್ತು ಅನುವಂಶಿಕ ಹಕ್ಕು ಬಾಧ್ಯತೆಯ ಹಕ್ಕುಗಳನ್ನು ಕಳೆದುಕೊಳ್ಳಲು ಮುಖ್ಯಕಾರಣ ಎಂದು ನನ್ನ ಅನಿಸಿಕೆ.

ಬ್ರಿಟಿಷರು ತಮಗೆ ಪರಿಚಯವಿದ್ದ ವಿಕ್ಟೋರಿಯ ಮಾದರಿಯನ್ನೆ ಅನುಸರಿಸಿ, ಮಹಿಳೆಯರಿಗೆ ಅನೇಕ ತರದ ಅಧಿಕಾರಗಳನ್ನು ಕೊಡುತ್ತಿದ್ದಂತ ಸಾಂಪ್ರದಾಯಿಕ ಕಾಯಿದೆಗಳನ್ನು ಮೀರಿ ಭೂಅಧಿಕಾರವನ್ನು 'ಕುಟುಂಬದ ಯಜಮಾನನಿಗೆ' ಕೊಟ್ಟರು. ಇದು, ಆಸ್ತಿಯೆಲ್ಲವು ಯಾವುದೇ ಆಧಾರವಿಲ್ಲದೆ ಪುರುಷನ ಕೈಯಲ್ಲಿ ಕೇಂದ್ರೀ ಕೃತಗೊಳ್ಳುವಂತೆ ಮಾಡಿತು, ಮತ್ತು ಮಹಿಳೆಯರಿಗೆ ಅನುವಂಶಿಕ ಹಕ್ಕು ಬಾಧ್ಯತೆ ಸಿಗದಿರುವುದಕ್ಕೆ ದಾರಿ ಮಾಡಿಕೊಟ್ಟಿತು. ಜೊತೆಗೆ ಭೂಕಂದಾಯ ಸುಲಿಗೆಯು ಗ್ರಾಮೀಣ ಪ್ರದೇಶದ ಆರ್ಥಿಕ ಉಳಿತಾಯವನ್ನು ಬರಿದು ಮಾಡಿ ರೈತರು ಮತ್ತಷ್ಟು ಬಡವರಾಗುವಂತೆ ಮಾಡಿತು. ಪಾರಂಪರಿಕ ಕಸುಬುಗಳು ನಾಶವಾಗಿ ದುರ್ಬಲಗೊಂಡ ಕಸುಬುದಾರರು ಪುನಃ ತಮ್ಮ ಸಣ್ಣಹಿಡುವಳಿಗೆ ಬರುವಂತಾಯಿತು. ಪರಿಣಾಮವಾಗಿ ಭೂಮಿಯ ಮೇಲಿನ ಒತ್ತಡ ಜಾಸ್ತಿಯಾಗಿ ಇದು ಭೂ ಒಡೆತನಕ್ಕೆ ವಿಶೇಷ ಬಲ ಮತ್ತು ಸ್ಥಾನವನು ತಂದುಕೊಟ್ಟಿತು.

ಹೀಗೆ ಗ್ರಾಮೀಣ ಸಮಾಜ ಮತ್ತು ಕಸುಬುದಾರರ ಗುಂಪುಗಳು ಹೆಚ್ಚು ಬಡವರಾಗುತ್ತಾ ಬಂದ ಹಾಗೆ ಸ್ತ್ರೀ ಧನ ಪರಂಪರೆಯು ಹೆಚ್ಚು ಹೊರೆಯಾಗುತ್ತಾ ಬಂದಿತು. ಹೆಣ್ಣು ಮಕ್ಕಳು ಬೇರೆಯವರ ಆಸ್ತಿ (ಪರಾಯಧನ್) ಎಂದು ನೋಡುವ ಪಾರಂಪರಿಕ ದೃಷ್ಟಿಕೋನವು ಹೊಸ ಮತ್ತು ಕೆಟ್ಟ ಅರ್ಥವನ್ನು ಪಡೆದುಕೊಂಡಿತು. 'ಬೇರೆಯವರ ಆಸ್ತಿ' ಎಂಬ ಪದವು ಮಹಿಳೆಯನ್ನು ಒಂದು ಸಂಪತ್ತು ಅನ್ನುವ ದೃಷ್ಟಿಯಿಂದ ನೋಡುತ್ತದೆ. ಮಹಿಳೆಯರು ತಮ್ಮ ಹಕ್ಕಿನಿಂದ ಸ್ತ್ರೀಧನವನ್ನು ಆಸ್ತಿಯಾಗಿ ತೆಗೆದುಕೊಂಡು ಹೋಗುವಂತ ಸಮಾಜಕ್ಕೆ ಇದು ಒಂದು ಸಮರ್ಪಕ ವಿವರಣೆಯಾಗಿದೆ. ವಧುವು ತನ್ನ ಹೊಸ ಮನೆಗೆ ಪ್ರವೇಶಿಸುವುದನ್ನು ಮನೆಗೆ ಲಕ್ಷ್ಮೀ ಬಂದಂತೆ ಎಂದು ಭಾವಿಸುವ ಪರಂಪರೆಯಿದೆ. ಎಷ್ಟೋ ಸಮುದಾಯಗಳಲ್ಲಿ ಈಗಲೂ ಈ ಪರಂಪರೆಯ ಚಿಹ್ನೆಗಳು ಉಳಿದಿವೆ. ನವ ವಧುವು ಅರಿಶಿನದಲ್ಲಿ ಅದ್ದಿದ ಪಾದದಿಂದ ನೆಲದ ಮೇಲೆ ಪವಿತ್ರವಾದ ಹೆಜ್ಜೆಗುರುತು ಇಡುವುದರ ಮೂಲಕ ತನ್ನ ಗಂಡನ ಮನೆ ಪ್ರವೇಶಿಸುತ್ತಾಳೆ. ಈ ಹೆಜ್ಜೆಗುರುತನ್ನು ಸಂಪತ್ತಿನ ದೇವತೆ ಲಕ್ಷ್ಮಿಗೆ ಹೋಲಿಸುತ್ತಾರೆ.

ಮಹಿಳೆಯರು ಅನುವಂಶಿಕ ಹಕ್ಕು ಬಾಧ್ಯತೆಯಿಂದ ಹೆಚ್ಚು ಹೆಚ್ಚು ವಂಚಿತರಾದಂತೆ ಹೆಣ್ಣು ಮಕ್ಕಳು ಹೊರೆಯೆನ್ನುವಂತೆ ಕಾಣತೊಡಗಿದರು. ಬೇಡವಾದ ಹೊರೆಯಿಂದ ಬಿಡುಗಡೆ ಹೊಂದುವುದರಿಂದ ದೊರೆಯುವ ಧಾರ್ಮಿಕ ಅನುಕೂಲಗಳು (ಧಾರ್ಮಿಕ ಕರ್ತವ್ಯದಿಂದ ದೊರಕುವ ಅನುಕೂಲಗಳು) ಮಗಳನ್ನು ಉಡುಗೊರೆಯಾಗಿ ನೀಡುವ ಕನ್ಯಾದಾನದಿಂದ ದೊರಕುವುದಿಲ್ಲ. ಮಹಿಳೆಯರ ಜೀವನವನ್ನು ಅಪಮೌಲ್ಯಗೊಳಿಸುವ ಮತ್ತು ಅವರ ಆರ್ಥಿಕ ಹಕ್ಕುಗಳನ್ನು ಸೀಮಿತಗೊಳಿಸುವ ಈ ಸಂದರ್ಭದಲ್ಲಿ ವರದಕ್ಷಿಣೆಯು ವರನ ಕುಟುಂಬಕ್ಕೆ ನೀಡುವ ಕಾಣಿಕೆಯ ರೂಪವನ್ನು ಪಡೆದು, ವರನ ಕಡೆಯವರು ವಧುವಿನ ಕುಟುಂಬದಿಂದ ಭಾರವನ್ನು ವಹಿಸಿಕೊಳ್ಳುವ ಪದ್ಧತಿಯಾಯಿತು.

ಮಹಿಳೆಯ ಕೆಲಸವನ್ನು ಅಪಮೌಲ್ಯಗೊಳಿಸುವುದು

ಮಹಿಳೆಯರನ್ನು ಒಂದು ಆರ್ಥಿಕ ಹೊರೆ ಎಂದು ಏಕೆ ಪರಿಗಣಿಸಲು ಪ್ರಾರಂಭಿಸಿದರು ? ವ್ಯವಸಾಯ ಮಾಡುವ ಮನೆಗಳಲ್ಲಿ ಮಹಿಳೆಯ ಶ್ರಮವು ತುಂಬ ಮುಖ್ಯವಾಗಿದ್ದು. ಇಂತಹ ಸಮಾಜಗಳಲ್ಲಿ ಶ್ರಮಶಕ್ತಿಯನ್ನು ಅಧಿಕ ಭೂಮಿ ಮತ್ತು ಕೊರತೆ ಶ್ರಮದ ಜೊತೆ ಮೌಲ್ಯಮಾಪನ ಮಾಡುತ್ತಾರೆ. ಇದರಿಂದ ಭಾರತದ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಈಗಲೂ ಇರುವ 'ವಧು ಬೆಲೆ'ಯು ಏಷ್ಯಾ ಮತ್ತು ಆಫ್ರಿಕಾದ ಗ್ರಾಮೀಣ ಸಮುದಾಯಗಳಲ್ಲಿ ಕೂಡ ಒಂದು ಪದ್ಧತಿಯಾಗಿರುವುದು ಕಂಡುಬರುತ್ತದೆ. ಅನೇಕ ಗ್ರಾಮೀಣ ಸಮಾಜಗಳಲ್ಲಿ ಅಮೂಲ್ಯವಾದ ಆಸ್ತಿಯೆಂದು ಕರೆಯುವ ಒಬ್ಬ ವಯಸ್ಕ ಮಹಿಳಾ ಶ್ರಮಶಕ್ತಿಯನ್ನು ಕಳೆದುಕೊಳ್ಳುವುದಕ್ಕೆ ಆವಳ ತವರು ಮನೆಗೆ ಪರಿಹಾರ ನೀಡಬೇಕಾಗುತ್ತಿತ್ತು. ಆದರೆ ಭಾರತದ ಅರ್ಥವ್ಯವಸ್ಥೆ ವಸಾಹತಶಾಹಿಯಾದಾಗ, ಆದಂತೆ, ಭೂಮಿಯ ಕೊರತೆ ಮತ್ತು ಜನಸಂಖ್ಯೆಯ ಒತ್ತಡ ಹೆಚ್ಚಾದಂತೆ ಭೂಮಿಯನ್ನು ಹೊಂದುವುದೇ ಒಂದು ದೊಡ್ಡ ಆಸ್ತಿಯಾಯಿತು. ಇಂತಹ ಸಮಯದಲ್ಲಿ ಭೂಮಿಯ ಒಡೆತನವೇನಾದರು ಸಂಪೂರ್ಣವಾಗಿ ಪುರುಷರ ಕೈಯಲ್ಲಿದ್ದರೆ, ಅಂತಹವರು ಮಹಿಳೆಯರನ್ನು ಕೇವಲ ಅವಲಂಬಿತರು ಎಂದು ಭಾವಿಸಿ, ಅವರು ಗಂಡು ಮಕ್ಕಳಂತೆ ಆಸ್ತಿಯಾಗುವುದಕ್ಕಿಂತ ಹೊರೆಯಾಗುತ್ತಾರೆ ಎಂದು ಪರಿಗಣಿಸಲು ಪ್ರಾರಂಭಿಸಿದರು. ಹೀಗೆ ಮಹಿಳೆ

ಯರ ಶ್ರಮ ಪ್ರಧಾನವಾಗಿರುವ ಕೃಷಿ ಮನೆಗಳಲ್ಲಿ ಬಿಟ್ಟರೆ ಉಳಿದೆಡೆ ವಧುವನ್ನು ಕರೆತರುವುದರಿಂದ ಕುಟುಂಬದ ಆರ್ಥಿಕ ಹೊರೆ ಮತ್ತಷ್ಟು ಹೆಚ್ಚುತ್ತದೆ ಎಂದು ತಿಳಿಯುತ್ತಾರೆ.

ಹೊಸ ಶಕ್ತಿ ಕೇಂದ್ರಗಳು

ಹೆಚ್ಚಾಗುತ್ತಿರುವ ವರದಕ್ಷಿಣೆಯು, ಮಹಿಳೆಯರ ಜೀವನವನ್ನು ಯಾವುದೇ ಆಧಾರವಿಲ್ಲದ ರೀತಿಯಲ್ಲಿ ಸೀಮಿತಗೊಳಿಸುವ ಕೆಲವು ಧೋರಣೆಗಳಿಗೂ ಸಂಬಂಧಿಸಿದೆ. ಹತ್ತೊಂಬತ್ತನೆ ಶತಮಾನದಲ್ಲಿ ಹೊಸ ಆಡಳಿತ ಯಂತ್ರ ಸ್ಥಾಪನೆಯಾದ ನಂತರ, ಪಾರಂಪರಿತ ಕೃಷಿ ವ್ಯವಸ್ಥೆಯ ಹೊರಗೆ ಹೊಸ ಶಕ್ತಿಕೇಂದ್ರಗಳು ಹುಟ್ಟಿಕೊಂಡದ್ದರಿಂದ ಮಹಿಳೆಯರ ಆರ್ಥಿಕ ಮೌಲ್ಯ ಕಡಿಮೆಯಾಗಲಾರಂಭಿಸಿತು. ಸಣ್ಣ ಅಥವಾ ಸರಾಸರಿ ಹಿಡುವಳಿಯ ಒಡೆತನ ಎಂದೂ ಮಾಡದೆ ಇದ್ದುದನ್ನು, ವಸಾಹತು ಯಂತ್ರ ರೂಪಿಸಿದ ಹೊಸ ಉದ್ಯೋಗಗಳು ಮತ್ತು ಅವಕಾಶಗಳು ತೀವ್ರಗತಿಯ ಆರ್ಥಿಕ ಮುಂದುವರಿಕೆಗೆ ಮತ್ತು ರಾಜಕೀಯ ಪ್ರಬಲತೆಗೆ ಅವಕಾಶಮಾಡಿಕೊಟ್ಟಿತು. ಗ್ರಾಮಲೆಕ್ಕಿಗ, ಆರಕ್ಷಕ ಅಥವಾ ಸರ್ಕಾರಿ ಕಛೇರಿಯ ಗುಮಾಸ್ತ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿನ ಉದ್ಯೋಗ - ಒಬ್ಬ ವ್ಯಕ್ತಿಗೆ ಹೊಡೆಯುವ ಹಿಂಸಿಸುವ ಮತ್ತು ಲಂಚ ತೆಗೆದುಕೊಳ್ಳುವ ಅರ್ಹತೆಯನ್ನು ತಂದುಕೊಟ್ಟಿತು. ಸ್ವಾತಂತ್ರ್ಯ ನಂತರ ಈ ಪದ್ಧತಿ ಇನ್ನೂ ಹೆಚ್ಚಿನ ಶಕ್ತಿಯನ್ನು ಪಡೆದುಕೊಂಡಿತು. ದೇಶಾದ್ಯಂತ ಸರ್ಕಾರಿ ಕ್ಷೇತ್ರವು ಮೊದಲು ಪುರುಷರಿಗೆ ಮಾತ್ರ ತೆರೆದಿದ್ದರಿಂದ, ಕಳೆದ ಒಂದುವರೆ ಶತಮಾನದಲ್ಲಿ ಪುರುಷರ ಪ್ರಾಬಲ್ಯ ಹೆಚ್ಚಾಯಿತು. ಇತ್ತೀಚಿನ ವರ್ಷಗಳಲ್ಲಷ್ಟೆ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿ ಸರ್ಕಾರಿ ಸೇವೆಗಳನ್ನು ಪ್ರವೇಶಿಸಲು ಪ್ರಾರಂಭಿಸಿದ್ದಾರೆ. ಆದರೆ ಅವು ಸಾಮಾನ್ಯವಾಗಿ ಅಧಿಕಾರವಿಲ್ಲದ ಉದ್ಯೋಗಗಳಾದ ದಾದಿ ಅಥವಾ ಶಾಲಾ ಶಿಕ್ಷಕಿಯರಾಗಿ ಮಾತ್ರ.

ಗ್ರಾಮೀಣ ಮನೆಗಳಲ್ಲಿ ಗಂಡ - ಹೆಂಡತಿ ಇಬ್ಬರು ಕುಟುಂಬಕ್ಕೋಸ್ಕರ ದುಡಿಯುತ್ತಾರೆ. ಅವರಿಬ್ಬರ ನಡುವೆ ಅಧಿಕಾರ ಅಸಮತೋಲನಕ್ಕೆ ಅವಕಾಶ ಕಡಿಮೆಯಿರುತ್ತದೆ. ಏಕೆಂದರೆ ಇಂತಹ ಮನೆಗಳಲ್ಲಿ ಮಹಿಳೆಯ ಶ್ರಮ ಹೆಚ್ಚು ಮೌಲ್ಯವುಳ್ಳದ್ದಾಗಿರುತ್ತದೆ. ಆದರೆ ಗಂಡ ಒಬ್ಬ ಆರಕ್ಷಕ ಅಥವಾ ಅಂಚೆ ಕಛೇರಿಯ ಗುಮಾಸ್ತನಾದರೆ ಅವನ ಸ್ಥಾನ dramaticlly ಬದಲಾಗುತ್ತದೆ. ನಿಯಮಿತ ನಗದು ವರಮಾನ ಪಡೆಯುವುದರ ಜೊತೆಗೆ ಭೂಮಿಯಿಂದ ಕೂಡ ವರಮಾನ ಬರುವುದರಿಂದ ಅವನ ಕುಟುಂಬಕ್ಕಿಂತ ಹೆಚ್ಚು ಶ್ರೀಮಂತವಾಗಿರುತ್ತದೆ; ಮತ್ತು ಅವನು ಒಬ್ಬ ರೈತನಾಗಿ ಪಡೆಯಲಾಗದಿದ್ದ ಅಧಿಕಾರವನ್ನು ಈಗ ಪಡೆಯುತ್ತಾನೆ. ಇಲ್ಲಿ ಪ್ರಭಾವ ಮತ್ತು ವರಮಾನ ಸಂಪೂರ್ಣವಾಗಿ ಪುರುಷನದಾದರೆ, ಭೂಮಿಯಿಂದ ಬರುವ ವರಮಾನದಲ್ಲಿ ಹೆಂಡತಿಯ ಶ್ರಮ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳುತ್ತದೆ. ' ಮಹಿಳೆಯರು ಇನ್ನೂ ಕೃಷಿ ಕ್ಷೇತ್ರದಲ್ಲೆ ಕೆಲಸ ಮಾಡುತ್ತಿದ್ದಾರೆ. ಆದರೆ ಪುರುಷರು ಹೊಸಹೊಸ ಉದ್ಯೋಗಗಳಲ್ಲಿ ಮತ್ತು ವ್ಯವಹಾರಗಳಲ್ಲಿ ಅವಕಾಶ ಪಡೆಯುತ್ತಿರುವುದರಿಂದ ಅವರ ಆರ್ಥಿಕ ಮತ್ತು ರಾಜಕೀಯ ಪ್ರಾಬಲ್ಯತೆ ಹೆಚ್ಚಾಗಿರುವುದು ಕಂಡುಬರುತ್ತದೆ.

ವರದಕ್ಷಿಣೆಯ ಬದಲಾವಣೆಗಳು

ಈಗಿನ ವಿವಾಹ ವ್ಯವಸ್ಥೆ ಈ ಅಧಿಕಾರ ಸಾಮ್ಯವನ್ನು ಪ್ರಾಮಾಣಿಕವಾಗಿ ಮತ್ತು ಖಚಿತವಾಗಿ ಪ್ರತಿಬಿಂಬಿಸುತ್ತದೆ. ಉದಾ:- ಮಗಳಿಗೆ ಒಬ್ಬ ಪೊಲೀಸ್ ಅಧಿಕಾರಿಯನ್ನು ಪಡೆಯಲು ಕೊಡಬೇಕಾದ ವರದಕ್ಷಿಣೆಯು, ಖಾಸಗಿ ಫರ್ಮಿನ ಒಬ್ಬ ಇಂಜಿನಿಯರ್‌ಗೆ ಕೊಡುವ ವರದಕ್ಷಿಣೆಗಿಂತ ಎಷ್ಟೋ ಪಟ್ಟು ಹೆಚ್ಚಾಗಿರುತ್ತದೆ. ಭಾರಿ ಮೊತ್ತದ ಲಂಚ ಪಡೆಯಲು ಅಧಿಕಾರವಿರುವಂತೆ ಸರ್ಕಾರಿ ಹುದ್ದೆಗಳಲ್ಲಿರುವ ಆದಾಯ ತೆರಿಗೆ, ಸುಂಕ ಮತ್ತು ವ್ಯಾಪಾರ ತೆರಿಗೆ ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ಹೆಚ್ಚಿಗೆ ವರದಕ್ಷಿಣೆ ನೀಡಲಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಒಬ್ಬ ಐ.ಪಿ.ಎಸ್. ಅಧಿಕಾರಿಯ ಬೆಲೆ 80 ಲಕ್ಷ. ಇದನ್ನು ವರದಕ್ಷಿಣೆ ಅನ್ನುವುದಕ್ಕಿಂತ ಹೆಚ್ಚಾಗಿ ಒಂದು ಬಂಡವಾಳ ಹೂಡಿಕೆ ಎಂಬ ದೃಷ್ಟಿಯಿಂದ ನೋಡಲಾಗುತ್ತದೆ. ಏಕೆಂದರೆ ಒಬ್ಬ ಐ.ಪಿ.ಎಸ್. ಅಧಿಕಾರಿಯನ್ನು ಅಳಿಯನನ್ನಾಗಿ ಪಡೆಯುವುದು ಎಂದರೆ ಒಂದು ಪ್ರಬಲವಾದ ಕುಟುಂಬದೊಂದಿಗೆ ಸಂಬಂಧ ಬೆಳೆಸುವುದು ಎಂದು ಮತ್ತು ಬೇರೆ ದಾರಿಗಳಿಂದ ಪಡೆಯಲಾಗದ ಆರ್ಥಿಕ ಅವಕಾಶಗಳು ಮತ್ತು ರಾಜಕೀಯ ಪ್ರಭಾವವನ್ನು ಈ ಮೂಲಕ ಪಡೆಯಬಹುದು. ಏಕೆಂದರೆ

ಭಾರತದಲ್ಲಿ ಲೈಸೆನ್ಸ್ ನೀಡುವ ಪದ್ಧತಿ ಅಲ್ಲಿನ ಅಧಿಕಾರಿಗಳ ಕೈಗೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ. ಉದಾ:- ಅಭಾವ ವಸ್ತುಗಳ ವ್ಯಾಪಾರಿ ಕೋಟ ಬಿಡುಗಡೆ ಮಾಡುವ, ಹೆಚ್ಚಿನ ಬೆಲೆಯುಳ್ಳ ಭೂಮಿಯನ್ನು ತಮಗೆ ಬೇಕಾದವರಿಗೆ ಕಡಿಮೆ ಬೆಲೆಗೆ ವಿತರಣೆ ಮಾಡುವ ಅಧಿಕಾರ ಈ ಅಧಿಕಾರಿಗಳ ಕೈಯಲ್ಲಿರುತ್ತದೆ. ಇಲ್ಲಿ ವರದಕ್ಷಿಣೆಯ ಮೊತ್ತ ಅವನು ಎಷ್ಟು ಅಧಿಕಾರ ಹೊಂದಿದ್ದಾನೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಅಂಚೆಕಛೇರಿಯ ಒಬ್ಬ ಅಧಿಕಾರಿ ಅವನು ಎಷ್ಟೇ ಓದಿದ್ದರೂ ಅಥವಾ ನೋಡಲು ಚೆನ್ನಾಗಿದ್ದರೂ, ಕೈಗಾರಿಕಾ ಸಚಿವಾಲಯದಲ್ಲಿ ಲೈಸೆನ್ಸ್ ನೀಡುವ ಒಬ್ಬ ಅಧಿಕಾರಿಗಿಂತ ಹೆಚ್ಚಿನ ವರದಕ್ಷಿಣೆ ಪಡೆಯಲಾರ. ವಿಶ್ವವಿದ್ಯಾನಿಲಯದ ಒಬ್ಬ ಶಿಕ್ಷಕ ಅನೇಕ ಪದವಿಗಳಿದ್ದರೂ ಲೋಕೋಪಯೋಗಿ ಇಲಾಖೆಯ ಅಥವಾ ಸುಂಕದ ಇಲಾಖೆಯ ಕಡಿಮೆ ದರ್ಜೆಯ ಅಧಿಕಾರಿಗಿಂತ ಕಡಿಮೆ ವರದಕ್ಷಿಣೆ ಪಡೆಯುತ್ತಾನೆ.

ನಗರದಲ್ಲಿ ಕೆಲಸ ಮಾಡುವ ಕೈತುಂಬ ಸಂಬಳ ತರುವ ಮಹಿಳೆಯರ ಪರಿಸ್ಥಿತಿ ಹೇಗಿದೆ? ಇಲ್ಲಿಯ ವಿವಾಹಗಳಲ್ಲೂ ಏಕೆ ವರದಕ್ಷಿಣೆ ಇನ್ನೂ ಉಳಿದಿದೆ? ಹೇಳಬೇಕೆಂದರೆ ಕೆಲವೇ ಮಂದಿ ಮಹಿಳೆಯರು ಅಧಿಕಾರ ಮತ್ತು ಭ್ರಷ್ಟಾಚಾರ ಇರುವ ಹುದ್ದೆಗಳಲ್ಲಿರುತ್ತಾರೆ. ಇರುವ ಕೆಲವು ಮಂದಿಯನ್ನು ವಧುವರರನ್ನಾಗಿ ನೋಡುವುದಿಲ್ಲ. ಭ್ರಷ್ಟಚಾರ ಮಾಡಬೇಕೆಂದರೆ, ಇತರ ಭ್ರಷ್ಟಜನಗಳ ಜೊತೆ ಸೇರಿ ಕೆಲಸ ಮಾಡಬೇಕಾಗುತ್ತದೆ. ಇಂತಹ ಕೆಟ್ಟ ವ್ಯವಹಾರಗಳಲ್ಲಿ ಮಗಳು ಅಥವಾ ಸೊಸೆ ತೊಡಗುವುದೇದರೆ ಅವಳ ಮನೆಯವರು ಭಯಪಡುತ್ತಾರೆ. ಹೆಚ್ಚಿನ ಮಹಿಳಾ ಅಧಿಕಾರಿಗಳು ಇಂತಹ ಅಧಿಕಾರ ಆಟಗಳಿಂದ ಹೊರಗುಳಿಯಲು ಪ್ರಯತ್ನಿಸುತ್ತಾರೆ. ಒಬ್ಬ ಐ.ಎ.ಎಸ್. ಅಧಿಕಾರಿ ತನ್ನೊಡನೆ ಕೆಲಸ ಮಾಡುವ ಮಹಿಳೆಯನ್ನು ಮದುವೆಯಾಗುವುದಕ್ಕಿಂತ, ಲಕ್ಷಗಟ್ಟಲೆ ವರದಕ್ಷಿಣೆ ತರುವ ಶ್ರೀಮಂತ ವ್ಯಾಪಾರಿಯ ಮಗಳನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಏಕೆಂದರೆ ಇಂತಹ ಮದುವೆಗಳು ಹೆಚ್ಚು ಸ್ಥಿರವಾಗಿರುತ್ತದೆ. ಭಾರತದಲ್ಲಿ ಒಂದು ಮಾಮೂಲಿ ಜೋಕೆಂದರೆ ಪುರುಷ ಐ.ಎ.ಎಸ್. ಅಧಿಕಾರಿಗಳ ವಿವಾಹ ಹೆಚ್ಚು ಸ್ಥಿರವಾಗಿರುತ್ತವೆ ಏಕೆಂದರೆ ಇಲ್ಲಿ ವ್ಯವಹಾರವೆಲ್ಲ ಸ್ಪಷ್ಟವಾಗಿ ಇತ್ಯರ್ಥವಾಗಿರುತ್ತವೆ. ಒಬ್ಬ ಪುರುಷ ಹಣವನ್ನು ಮದುವೆಯಾದರೆ ಮಹಿಳೆ ಐ.ಎ.ಎಸ್. ಎಂಬ ಮೂರು ಅಕ್ಷರಗಳನ್ನು ಮದುವೆಯಾಗುತ್ತಾಳೆ.

ವರಮಾನದ ಅಂತರ

ವೃತ್ತಿನಿರತ ಮಹಿಳೆಯರನ್ನು ಕೇವಲ ಸಂಬಳ ತರುವವರು ಎಂಬ ದೃಷ್ಟಿಯಿಂದ ನೋಡಲಾಗುತ್ತದೆ. ಅವರ ಸಂಬಳ ಅವರನ್ನು ಗಂಡಂದಿರಿಗೆ ಸಮಾನರನ್ನಾಗಿ ಮಾಡುವುದಿಲ್ಲ. ಏಕೆಂದರೆ ಈ ಸಣ್ಣಮೊತ್ತವು ಹಲವು ಗಂಡನ ಆದಾಯದ ಜೊತೆಗೆ ದಿನನಿತ್ಯದ ಖರ್ಚಿನಲ್ಲಿ ಸೇರಿಕೊಳ್ಳುತ್ತದೆ. ಗಂಡನಿಗೆ ಅನುವಂಶಿಕ ಹಕ್ಕುಬಾಧ್ಯತೆ ಸಿಗುವುದರಿಂದ ಮನೆಯಲ್ಲಿ ಅವನ ಸ್ಥಾನ ಭದ್ರವಾಗಿರುತ್ತದೆ. ಅವಳು ಜೀವನವಿಡೀ ಗಳಿಸುವ ಅಥವಾ ಉಳಿಸುವುದಕ್ಕಿಂತ ಹೆಚ್ಚಿನ ಮೊತ್ತವನ್ನು ಅವನು ಒಂದೇ ಸಲ ಪಡೆಯುತ್ತಾನೆ; ಜೊತೆಗೆ ಇಂದಿನ ಪ್ರಪಂಚದಲ್ಲಿ ವೃತ್ತಿನಿರತರಾದ ಅಥವಾ ವ್ಯವಹಾರ ಮಾಡುವ ಪುರುಷರು ಮಹಿಳೆಯರಿಗಿಂತ ಹೆಚ್ಚಾಗಿ ಗಳಿಸುತ್ತಾರೆ.

ಒಂದು ವಾಸ್ತವಿಕ ಉದಾಹರಣೆ ತೆಗೆದುಕೊಳ್ಳೋಣ. ಪ್ರತಿಭಾ (ಕಲ್ಪಿತ ಹೆಸರು) ಕಾಲೇಜಿನಲ್ಲಿ ಉಪನ್ಯಾಸಕಳು. ಅವಳು ವಿವೇಕನನ್ನು ಮದುವೆಯಾದ ಸಮಯದಲ್ಲಿ ತಿಂಗಳಿಗೆ ರೂ. 3,000 ಗಳಿಸುತ್ತಿದ್ದಳು. ಬಿಸಿನೆಸ್ ಮಾಡುತ್ತಿದ್ದ ವಿವೇಕ್ ತಿಂಗಳಿಗೆ ಸುಮಾರು ರೂ. 12,000 ಗಳಿಸುತ್ತಿದ್ದ. ಅವನ ಬಿಸಿನೆಸ್ ತೀವ್ರಗತಿಯಲ್ಲಿ ಬೆಳೆದು ಏಳು ವರ್ಷಗಳ ಒಳಗೆ, ತಿಂಗಳಿಗೆ ರೂ. 30,000 ದಿಂದ 50,000ಕ್ಕೆ ಕಡಿಮೆಯಿಲ್ಲದಂತೆ ಗಳಿಸಲು ಪ್ರಾರಂಭಿಸಿದನು. ಇದೇ ಸಮಯದಲ್ಲಿ ಪ್ರತಿಭಾಳ ವರಮಾನವು ತಿಂಗಳಿಗೆ ರೂ. 2,500ರಷ್ಟು ಹೆಚ್ಚಾಯಿತು. ಇಬ್ಬರ ನಡುವಿನ ವರಮಾನದ ಅಂತರ ಹೆಚ್ಚಾಯಿತು. ಇಬ್ಬರು ವಿವೇಕನ ಮನೆಯಲ್ಲೇ ವಾಸಿಸುತ್ತಿದ್ದರಿಂದ ಅವರಲ್ಲಿನ ಅಸಮಾನತೆ ಮತ್ತಷ್ಟು ಹೆಚ್ಚಾಯಿತು.

ಅವರದು ವರದಕ್ಷಿಣೆಯಿಲ್ಲದ ಮದುವೆಯಾದ್ದರಿಂದ ಅವಳ ಬಟ್ಟೆ ಮತ್ತು ದಿನನಿತ್ಯದ ಕೆಲವು ವಸ್ತುಗಳನ್ನು ಬಿಟ್ಟರೆ ಅವಳದು ಎಂದು ಹೇಳುವ ಯಾವುದೇ ವಸ್ತು ಆ ಮನೆಯಲ್ಲಿ ಇರಲಿಲ್ಲ. ವಿವೇಕ್ ತನ್ನ ಸಹೋದರರೊಂದಿಗೆ ಈಗಿನ ಬೆಲೆಯಲ್ಲಿ 60ಲಕ್ಷ ಬೆಲೆ ಬಾಳುವ

ಪಿತ್ರಾರ್ಜಿತ ಆಸ್ತಿ ದೊರೆಯುವುದಿಲ್ಲ ಎಂದು ಚೆನ್ನಾಗಿ ಗೊತ್ತಿದೆ. ಒಂದು ವೇಳೆ ಮದುವೆ ಮುರಿದು ಬಿದ್ದರೆ ಅವಳ ಜೀವನಮಟ್ಟ ಕಡಿಮೆಯಾಗುತ್ತದೆ, ಏಕೆಂದರೆ ಅವಳು ಆ ಮನೆಯಿಂದ ಹೊರಬರಬೇಕಾಗುತ್ತದೆ. ವಿವೇಕನ ಹೆಂಡತಿಯಾಗಿ ಆ ಮನೆಯಲ್ಲಿರಲು ಅವಳಿಗೆ ಹಕ್ಕಿದೆ. ಆದರೆ ತನ್ನದೆ ಹಕ್ಕಿನಿಂದ ಮಾವನ ಮನೆಯ ಆಸ್ತಿಯಲ್ಲಿ ಪಾಲನ್ನು ಪಡೆಯಲು ಅವಳಿಗೆ ಸಾಧ್ಯವಿಲ್ಲ. ಅದರಲ್ಲೂ ಆ ಆಸ್ತಿಗೆ ಅವಳು ಏನನ್ನು ಸೇರಿಸದೆ ಇರುವಾಗ ಒಂದು ವೇಳೆ ಅವಳ ಗಂಡ ಈಗಾಗಲೆ ಆಸ್ತಿಯನ್ನು ಹೊಂದಿದ್ದರೆ ವಿಧವೆಯಾಗಿ ಅವನ ಆಸ್ತಿಯಲ್ಲಿ ಪಾಲು ಪಡೆಯುವ ಅಧಿಕಾರ ಹೊಂದಿರುತ್ತಾಳೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಮದುವೆಯ ಸಂಬಂಧ ಇರಲಿ ಅಥವಾ ಮುರಿದು ಹೋಗಿರಲಿ, ವಿವೇಕ್ ಅಥವಾ ಅವನ ತಂದೆ ಉದಾರ ಮನಸ್ಸಿನಿಂದ ಅಥವಾ ಭೂಮಿತಿ ಕಾಯಿದೆ ಮೀರುವ ಮತ್ಯಾವುದೆ ಕೆಲವು ಒತ್ತಡಗಳಿಂದ ಅವಳನ್ನು ಒಬ್ಬ ಸಹ ಪಾಲುದಾರಳನ್ನಾಗಿ ಮಾಡಿಕೊಳ್ಳಲು ನಿರ್ಧರಿಸದ ಹೊರತು ಅವಳ ಗಂಡನ ಜೀವಿತಾವಧಿಯಲ್ಲಿ ಕಾನೂನಿನ ಪ್ರಕಾರ ಪಾಲು ಪಡೆಯುವ ಅಧಿಕಾರವನ್ನು ಅವಳು ಹೊಂದಿರುವುದಿಲ್ಲ.

ಅನುವಂಶಿಕ ಹಕ್ಕುಬಾಧ್ಯತೆಯಿಲ್ಲದಿರುವ ಹೆಣ್ಣು ಮಕ್ಕಳು

ಇದು ಸಮಸ್ಯೆಯ ಮುಖ್ಯ ಅಂಶವಾಗಿದೆ. ಮಹಿಳೆಯರು ಗಂಡನ ಮನೆಯ ಆಸ್ತಿಯಲ್ಲಿನ ಪಾಲನ್ನು ತಮ್ಮದೆ ಹಕ್ಕಿನಿಂದ ಪಡೆಯುವುದಿಲ್ಲ. ಬದಲಿಗೆ ಗಂಡಂದಿರ ಮೂಲಕ ಪಡೆಯುತ್ತಾರೆ. ಆದುದರಿಂದ ಮಹಿಳೆಯರು ಹೆಣ್ಣುಮಕ್ಕಳು ಅಥವಾ ಹೆಂಡತಿಯರಾಗಿ ಪಡೆಯುವುದಕ್ಕಿಂತ ಹೆಚ್ಚಾಗಿ ವಿಧವೆಯರಾಗಿ ಪಿತ್ರಾರ್ಜಿತ ಆಸ್ತಿ ಹಕ್ಕನ್ನು ಪಡೆಯುತ್ತಾರೆ. ಈ ಕಾರಣದಿಂದಲೇ ಮಗಳ ಮದುವೆ ಸಮಯದಲ್ಲಿ ಕೊಡುವ ವರದಕ್ಷಿಣೆಯನ್ನು ಅವಳ ಸ್ವಂತ ಆಸ್ತಿ ಎನ್ನುವುದಕ್ಕಿಂತ ಮಾವನ ಮನೆಗೆ ಕೊಂಡೊಯ್ಯುವ ಕಾಣಿಕೆಯೆಂದು ನೋಡಲಾಗುತ್ತದೆ. ಈ ವರದಕ್ಷಿಣೆ ಮೂಲಕ ತಂದೆ ತಾಯಿಗಳು ಅವಳ ಗಂಡನ ಮನೆಯ ಆಸ್ತಿಯಲ್ಲಿ ತಮ್ಮ ಮಗಳ ಪಾಲನ್ನು ಕೊಂಡುಕೊಳ್ಳುತ್ತಾರೆ. ಒಬ್ಬ ಮಹಿಳೆ ತನ್ನ ಮದುವೆ ಸಮಯದಲ್ಲಿ ತಕ್ಷಣವೆ ಗಂಡನ ಮನೆಯ ಪೂರ್ಣ ಸದಸ್ಯತ್ವವನ್ನು ಪಡೆಯದೇನೆ ತನ್ನ ತವರು ಮನೆಯ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾಳೆ. ಅವಳು ತನ್ನ ಹೊಸಮನೆಯವರ ಹಿತಾಸಕ್ತಿಗಳಿಗೆ ವಿಧೇಯಳಾಗಿದ್ದರೆ ಮಾತ್ರ ಮುಂದೆ ಸಮಯ ಕಳೆದಂತೆ ಸದಸ್ಯತ್ವವನ್ನು ಪಡೆಯಬಹುದು. ತನ್ನ ತವರು ಮನೆಯಲ್ಲಿ ದುರ್ಬಲವಾದ ಹಕ್ಕುಗಳನ್ನು ಹೊಂದಿರುವುದೆ ಅವಳ ಈ ಅಭದ್ರತೆಗೆ ಕಾರಣವಾಗಿದೆ.

ಭಾರತವೂ ಸೇರಿದಂತೆ ಅನೇಕ ಪಾರಂಪರಿಕ ಸಮಾಜಗಳಲ್ಲಿನ ಅನುವಂಶಿಕ ಹಕ್ಕುಬಾಧ್ಯತೆ ಕಲ್ಪನೆಯು ಆಧುನಿಕ ಪಾಶ್ಚಿಮಾತ್ಯ ಆಸ್ತಿ ಕಲ್ಪನೆಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಒಬ್ಬ ವ್ಯಕ್ತಿಗೆ ತನ್ನ ಆಸ್ತಿಯನ್ನು ತಾನು ಆಯ್ಕೆ ಮಾಡಿದ ಅವನು ಅಥವಾ ಅವಳಿಗೆ ಬರೆಯುವ ಅವಕಾಶವಿರುತ್ತದೆ. ಆದರೆ ಪಾರಂಪರಿಕ ಸಮಾಜಗಳು ಅಂಗವಿಕಲ ಅಥವಾ ಅಂಗಹೀನರು ಸೇರಿದಂತೆ ಪ್ರತಿಯೊಬ್ಬರ ಸದಸ್ಯರ ಹಕ್ಕುಗಳನ್ನು ಗುರುತಿಸುತ್ತದೆ. ಅವರು ಆಸ್ತಿಯ ಮೇಲೆ ಹಕ್ಕು ಚಲಾಯಿಸಲಾಗದಿದ್ದರೂ, ಅದರಿಂದ ಜೀವನ ನಿರ್ವಹಣೆ ಮಾಡಿಕೊಳ್ಳಬಹುದು. ಇಲ್ಲಿ ಮೂಲಭೂತವಾಗಿ ಆಸ್ತಿಯನ್ನು ವಂಶದ ಆಸ್ತಿಯನ್ನಾಗಿ ನೋಡಲಾಗುತ್ತದೆಯೇ ಹೊರತು ವ್ಯಕ್ತಿಯ ಆಸ್ತಿಯನ್ನಾಗಿ ಅಲ್ಲ. ಭಾರತದ ಕೆಲವು ಸಮುದಾಯಗಳಲ್ಲಿ ಮಹಿಳೆಯರು ತವರು ಮನೆ ಮತ್ತು ಗಂಡನ ಮನೆ ಎರಡರಲ್ಲೂ ಅನುವಂಶಿಕ ಹಕ್ಕುಬಾಧ್ಯತೆಯನ್ನು ಹೊಂದಿರುತ್ತಾರೆ. 'ಮಿತಾಕ್ಷರ' ಪದ್ಧತಿಯನ್ನು ಅನುಸರಿಸುವ ಇತರ ಸಮುದಾಯಗಳಲ್ಲಿ ಸ್ತ್ರೀಧನಕ್ಕೆ ಅವಕಾಶವಿರುತ್ತಿತ್ತು. ಆದರೆ ಕುಟುಂಬದ ಆಸ್ತಿಯನ್ನು ನಿಯಂತ್ರಿಸುವ ಮತ್ತು ನೋಡಿಕೊಳ್ಳುವ ಹಕ್ಕನ್ನು ಪುರುಷರೇ ಹೊಂದಿರುವಂತೆ ಸಮುದಾಯಗಳಲ್ಲೂ ಮಹಿಳೆಯರು ಹೆಂಡತಿಯರಾಗಿ, ಹೆಣ್ಣುಮಕ್ಕಳಾಗಿ, ವಿಧವೆಯರಾಗಿ, ಸಹೋದರಿಯರಾಗಿ ಮತ್ತು ಮನೆಯ ಇತರ ಸಂಬಂಧಿಗಳಾಗಿ ನಿಖರವಾದ ನಿರ್ವಾಹಕ ಹಕ್ಕನ್ನು ಹೊಂದಿರುತ್ತಿದ್ದರು.

ಮಹಿಳೆಯರಿಗೆ ಸಮಾನ ಹಕ್ಕನ್ನು ನೀಡುತ್ತದೆ ಎಂದು ಹೇಳುವ ಉತ್ತರಾಧಿಕಾರ ಕಾಯಿದೆ ಮಹಿಳೆಯರ "ಪಾರಂಪರಿಕ" ಹಕ್ಕುಗಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಈ ಹಾನಿ ಎರಡು ಅಂಶಗಳಲ್ಲಿ ಕಂಡು ಬರುತ್ತದೆ.

1. ಒಬ್ಬ ವ್ಯಕ್ತಿ ತನ್ನ ಆಸ್ತಿಯನ್ನು ತನಗೆ ಇಷ್ಟಬಂದ ವರಿಗೆ ಉಯಿಲು ಬರೆಯುವ ಅವಕಾಶವನ್ನು ಉದ್ದೇಶಪೂರ್ವಕವಾಗಿ ಸೇರಿಸಿರುವುದು ಪಾರಂಪರಿಕ ಹಿಂದೂ ಸಂಪ್ರದಾಯದ ಕಾಯಿದೆಗೆ ಹೊರತಾಗಿದೆ. ಇದು ತಂದೆಗಳು ಹೆಣ್ಣು ಮಕ್ಕಳಿಗೆ ಏನನ್ನು ಕೊಡದೆ ಎಲ್ಲವನ್ನು ಗಂಡುಮಕ್ಕಳ ಪರವಾಗಿ ಉಯಿಲು ಬರೆಯಲು ಅವಕಾಶ ಮಾಡಿಕೊಡುತ್ತದೆ.

2. ಹಿಂದೂ ಅವಿಭಕ್ತ ಕುಟುಂಬ ಆಸ್ತಿಯಲ್ಲಿ ಗಂಡು ಮಕ್ಕಳು ಹುಟ್ಟುತ್ತಲೆ ಹಕ್ಕು ಪಡೆದರೆ, ಹೆಣ್ಣು ಮಕ್ಕಳು ಕೊಪಾರ್ಸಿನರಿಯಾಗಿ ಆಸ್ತಿ ಪಡೆದ ಪುರುಷ ರಿಂದ ಕೇವಲ ಹೆಸರಿಗೆ ಮತ್ತು ಅನಿರ್ದಿಷ್ಟ ಭಾಗ ವನ್ನು ಮಾತ್ರ ಪಡೆಯುತ್ತಾರೆ.

ಆಧುನಿಕ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರು

ಕೊಪಾರ್ಸಿನರಿಯಲ್ಲಿ ಹೆಣ್ಣುಮಕ್ಕಳು ಕಡಿಮೆ ಮತ್ತು ಸಮವಲ್ಲದ ಪಾಲನ್ನು ಪಡೆಯುತ್ತಾರೆ. ಆದರೆ ಇದನ್ನು ಕೂಡ ಯಾರ ಪರವಾಗಿ ಆಸ್ತಿ ಬರೆಯುತ್ತಾರೊ ಅವರ ಹೆಸರಿಗೆ ಉಯಿಲು ಬರೆಯಲು ಈ ಕಾಯಿದೆ ಅವಕಾಶ ಮಾಡಿಕೊಡುತ್ತದೆ. ಹೆಣ್ಣು ಮಕ್ಕಳು ತಮ್ಮ ಸಹೋದರರ ಪರವಾಗಿ ತಮ್ಮ ಹಕ್ಕನ್ನು ತೊರೆಯು ವಂತೆ ಮಾಡಲು ಈ ಅವಕಾಶವನ್ನು ಬಳಸಲಾಗುತ್ತದೆ. ಹೀಗೆ ಹಿಂದೂ ಅವಿಭಕ್ತ ಕುಟುಂಬದ ಕೂಪರ್ಸಿನರಿ ಆಸ್ತಿ ಯಲ್ಲಿ ತಂದೆಗೆ ಮಗನ ಅನುವಂಶಿಕ ಹಕ್ಕುಬಾದ್ಯತೆಯನ್ನು ಕತ್ತರಿಸಿ ಹಾಕಲು ಸಾಧ್ಯವಿಲ್ಲ. ಆದರೆ ಇದೇ ರೀತಿಯ ಭರವಸೆ ಹೆಣ್ಣುಮಕ್ಕಳ ಹಕ್ಕುಗಳಿಗೆ ಇಲ್ಲ. ಇದರಿಂದ ನಮ್ಮ ಆಧುನಿಕ ಅನುವಂಶಿಕ ಹಕ್ಕುಬಾಧ್ಯತೆ ಕಾನೂನು ಗಳು ಹೆಚ್ಚಾಗಿ ಪುರುಷರ ಪರವಾಗುತ್ತಾ ಹೋದರೆ, ಮಹಿಳೆಯರ ಹಿತಾಸಕ್ತಿಗಳಿಗೆ ವಿರುದ್ಧವಾಗುತ್ತಾ ಹೋಗುತ್ತಿದೆ. ಮಾತೃಸಂತಾನದಲ್ಲಿ ಅನುವಂಶಿಕ ಹಕ್ಕು ಬಾದ್ಯತೆ ಇರುವಂತೆ ಕೆಲವು ಸಮುದಾಯಗಳು ಕೂಡ ಉದಾ : ಕೇರಳದ ನಾಯರ್ಸ್ ಸಮುದಾಯ ನಿಧಾನ ವಾಗಿ ಪಿತೃಸಂತಾನ ಅನುವಂಶಿಕ ಹಕ್ಕುಬಾದ್ಯತೆ ಕಡೆಗೆ ಹೋಗುತ್ತಿವೆ. ಮಹಿಳೆಯರ ಆರ್ಥಿಕ ಹಕ್ಕುಗಳಿಗೆ ಸಾಕಷ್ಟು ರಕ್ಷಣೆ ನೀಡುತ್ತಿದ್ದಂತೆ ಪದ್ಧತಿಗಳು ಇಂದು ತಮ್ಮ ಅಸ್ತಿತ್ವಗಳನ್ನು ಕಳೆದುಕೊಳ್ಳುತ್ತಿವೆ. ಭಾರತದ ಅರ್ಥವ್ಯವಸ್ಥೆ ಆಧುನೀಕರಣಗೊಂಡಂತೆ, ಆಸ್ತಿಯು ಹೆಚ್ಚುಹೆಚ್ಚಾಗಿ ಪುರುಷರ ಕೈಯಲ್ಲಿ ಕೇಂದ್ರೀಕೃತಗೊಳ್ಳು ತ್ತಿದೆ.

ಇಂದಿನ ವರದಕ್ಷಿಣೆ ವ್ಯವಸ್ಥೆಯು ಮಹಿಳೆಯರಿಗೆ ಅನುವಂಶಿಕ ಹಕ್ಕುಬಾಧ್ಯತೆಯಿಲ್ಲವಿರುವುದನ್ನು ಮತ್ತು ಹೇಗಾದರೂ ಮಾಡಿ ಹೆಣ್ಣುಮಕ್ಕಳಿಗೆ ಮದುವೆ ಮಾಡಿ ಮನೆಯಿಂದ ಹೊರಹಾಕುವ ತಂದೆ-ತಾಯಿಗಳ ಹತಾಶ ಮನೋಭಾವವನ್ನು ಸೂಚಿಸುತ್ತದೆ. ಅಕಸ್ಮಾತ್ ಮದುವೆ ಮಾಡಲು ವಿಫಲರಾದರೆ ಅದೊಂದು ದೊಡ್ಡ ಕಳಂಕ ಎಂದು ಪರಿಗಣಿಸುತ್ತಾರೆ. ಮಹಿಳೆಯನ್ನು ಅನುವಂಶಿಕ ಹಕ್ಕು ಬಾಧ್ಯತೆಯಿಲ್ಲದ ಪರಾವಲಂಬಿಯಾಗಿ ಕಳುಹಿಸುವುದರಿಂದ ಅವಳನ್ನು ಸ್ವೀಕರಿಸುವ ಕುಟುಂಬಕ್ಕೆ ಪರಿಹಾರ ನೀಡಬೇಕಾಗುತ್ತದೆ.

ಬದಲಾಗುತ್ತಿರುವ ವಿವಾಹ ಮಾದರಿಗಳು

ವರದಕ್ಷಿಣೆ ನಿಷೇಧ ಕಾನೂನು ಜಾರಿಗೆ ಬರುವ ಮೊದಲು ಸಮುದಾಯದ ನೀತಿನಿಯಮಗಳು ನಿಯಂತ್ರಿ ಸುತ್ತಿದ್ದವು. ಹುಡುಗನ ಮನೆಗೆ ಕೊಡುವ ಸಂಪತ್ತಿನ ಮೊತ್ತವು ಅವನ ಮರ್ಯಾದೆಗೆ ತಕ್ಕಂತೆ ಇದೆ ಎಂದು ಮತ್ತು ಸಮುದಾಯ ನಿಗದಿಪಡಿಸಿದ ಮತ್ತು ಮಿತಿಗಳಿಗೆ ಸಮನಾಗಿದೆ ಎಂದು ತೋರಿಸಲು ಕಾಣಿಕೆಗಳನ್ನು ಸಾರ್ವ ಜನಿಕವಾಗಿ ಪ್ರದರ್ಶಿಸಲಾಗುತ್ತಿತ್ತು.

ಬಿರದಾರಿ ನಿಗದಿಪಡಿಸಿದ ನಿಯಮಗಳಿಗೆ ವರದಕ್ಷಿಣೆ ಮೊತ್ತವು ಸೂಕ್ತವಾಗುವಂತೆ ಮಾಡಲು ಸಮುದಾಯದ ಶ್ರೀಮಂತ ಸದಸ್ಯರು ಬಡಕುಟುಂಬಗಳಿಗೆ ಆಗಾಗ ಸಹಾಯ ಮಾಡುತ್ತಿದ್ದರು. ಮದುವೆ ಸಮಯದಲ್ಲಿ ಮಗಳಿಗೆ ಕೊಡುವ ಎಲ್ಲ ವಸ್ತುಗಳನ್ನು ಸಾರ್ವಜನಿಕ ವಾಗಿ ಪ್ರದರ್ಶಿಸುವ ಮುಖ್ಯ ಉದ್ದೇಶ. ಈ ಒಂದು ವ್ಯವಹಾರಕ್ಕೆ ಸಮುದಾಯವೆ ಸಾಕ್ಷಿಯಾಗಿದೆ ಎಂಬು ದನ್ನು ಖಚಿತಪಡಿಸುವುದು. ಇದು, ಮಗಳಿಗೆ ಕೊಡುವ ಉಡುಗೊರೆಯ ಮೊತ್ತವು ಅವಳ ತಂದೆ-ತಾಯಿಯ ಸಂಪಾದನೆಗೆ ಸಮವಾಗಿದೆ ಎಂದು ತೋರಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಒಂದು ವೇಳೆ ಮದುವೆ ಏನಾದರು ಮುರಿದುಹೋದರೆ ವರನ ಕಡೆಯವರು ಈ ಉಡುಗೊರೆ ಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಲು ಸಾಧ್ಯವಿರುವು ದಿಲ್ಲ. ಹೀಗಾಗಿ ಸ್ತ್ರೀಧನವೆಂದು ಕರೆಯುವ ಹಣದ ಮೊತ್ತವನ್ನು ಹಿಂದಿರುಗಿಸಬೇಕಾದ ಸಂದರ್ಭ ಬಂದರೆ, ಹುಡುಗ ಹುಡುಗಿಯನ್ನು ಬೇರ್ಪಡಿಸುವಾಗ ಮಾತುಕತೆ

ನಡೆಸುವ ಸಮುದಾಯದ ಹಿರಿಯರಿಗೆ ವರನಕಡೆಯವರು ಬಾಕಿ ಕೊಡಬೇಕಾಗಿರುವ ಮೊತ್ತದ ಬಗ್ಗೆ ತಿಳಿದಿರುತ್ತದೆ. ಈಗಿನ ವರದಕ್ಷಿಣೆ ಕಾನೂನು ವರದಕ್ಷಿಣೆ ಕೊಡುವುದನ್ನು ತಡೆಯುವಲ್ಲಿ ಯಶಸ್ವಿಯಾಗಿಲ್ಲ. ಆದರೆ ಈ ವ್ಯವಹಾರ ವನ್ನು ಸುಲಭವಾಗಿ ಮುಚ್ಚಿಹಾಕಲು ಅವಕಾಶ ಮಾಡಿ ಕೊಡುತ್ತದೆ. ವರದಕ್ಷಿಣೆ ನೀಡುವುದನ್ನು ಕಾನೂನು ವಿರೋಧ ಎಂದು ಮಾಡಿರುವುದರಿಂದ ಮತ್ತು ತೆರಿಗೆ ಅಧಿಕಾರಿಗಳಿಂದ ಸಂಪತ್ತನ್ನು ಮುಚ್ಚಿಡಲು ಪ್ರಯತ್ನಿಸು ವುದರಿಂದ ವರದಕ್ಷಿಣೆ ವಿಷಯದಲ್ಲಿ ಈಗೀಗ ಹೆಚ್ಚು ಮೋಸ ನಡೆಯುತ್ತಿದೆ. ಆದುದರಿಂದ ಜಗಳದ ಸಮಯ ದಲ್ಲಿ ಹುಡುಗಿಯ ಮನೆಯವರಿಗೆ ತಾವು ಏನು ಕೊಟ್ಟಿ ದ್ದೆವು ಎಂದು ಹೇಳಲು ಕಷ್ಟವಾಗುತ್ತದೆ. ಮದುವೆ ಮಾತುಕತೆ ಸಮಯದಲ್ಲಿ ತಾವು ಮಾಡಿದ ಒಪ್ಪಂದ ಗಳಿಂದ ತಪ್ಪಿಸಿಕೊಳ್ಳಲು ವರನ ಕಡೆಯವರು ಪ್ರಯತ್ನಿಸು ವುದರಿಂದಲೆ ಎಷ್ಟೋ ಜಗಳಗಳು ಉಂಟಾಗುತ್ತವೆ.

ಪಾರಂಪರಿಕವಾಗಿ ಪೂರ್ವನಿರ್ಧಾರಿತ ಜಾತಿ ಮತ್ತು ಗೋತ್ರಗಳಲ್ಲಿ ಮದುವೆ ಮಾಡುತ್ತಿದ್ದಂತ ಸಮಯದಲ್ಲಿ, ಒಂದು ಪ್ರದೇಶದ, ಒಂದೇ ಜಾತಿಯ ಸದಸ್ಯರ ನಡುವೆ ಕೆಲವೆ ಕೆಲವು ಆರ್ಥಿಕ ಭಿನ್ನತೆಗಳು ಕಂಡುಬರುತ್ತಿದ್ದವು. ಕೆಲವು ಮನೆಗಳಲ್ಲಿ ಸಾಕಷ್ಟು ಸಂಪಾದಿಸುತ್ತಿದ್ದರೂ ಅವರ ಹೊರಗಿನ ಜೀವನ ಮಟ್ಟದ ತೋರ್ಪಡಿಕೆಯಲ್ಲಿ ಯಾವ ಬದಲಾವಣೆ ಇರುತ್ತಿರಲಿಲ್ಲ. ಶ್ರೀಮಂತಿಕೆಯನ್ನು ಪ್ರದರ್ಶಿಸುವುದು ಮತ್ತು ಮತ್ತೊಂದು ಜಾತಿಗೆ ಸೇರಲು ಪ್ರಯತ್ನಿಸುವುದನ್ನು ಕೀಳಾಗಿ ಕಾಣಲಾಗುತ್ತಿತ್ತು. ಆದರೆ ಕ್ರಮೇಣ ಜಾತಿಯಲ್ಲಿ ವರ್ಗ ಭಿನ್ನತ ಹುಟ್ಟಿಕೊಳ್ಳುವುದರ ಜೊತೆಗೆ ಒಂದೇ ಬಿರಿದಾರಿ ಮನೆಗಳ (ಸ್ಥಳೀಯ ಸಂಬಂಧಿ ಗಳ ಗುಂಪು) ದಿನ ನಿತ್ಯದ ಜೀವನ ಮಟ್ಟದಲ್ಲಿ ಅಗಾಧ ವಾದ ಭಿನ್ನತೆಗಳು ಹುಟ್ಟಿಕೊಂಡವು. ಇದರ ಪರಿಣಾಮ ವಾಗಿ ವರದಕ್ಷಿಣೆ ಮೊತ್ತದಲ್ಲಿ ಸಮುದಾಯ ನಿಗದಿ ಪಡಿಸುವ ನೀತಿ ನಿಯಮಗಳು ಮುರಿದುಹೋಗಿರುವು ದನ್ನು ನಾವು ಕಾಣಬಹುದು. ಪಾರಂಪರೆಯಲ್ಲಿ ವರದಕ್ಷಿಣೆ ಸಂಸ್ಕೃತಿ ಮತ್ತು ಹೈಪರ್‌ಗಮಿ ಅಂದರೆ ಮಗಳನ್ನು ಸಾಮಾಜಿಕವಾಗಿ ತಮಗಿಂತ ಉನ್ನತ ಸ್ಥಾನ ಹೊಂದಿರುವ ಮತ್ತು ಉತ್ತಮ ಗೋತ್ರದ ಮನೆಗೆ ಮದುವೆ ಮಾಡಿಕೊಡುವುದು ಇವೆರಡು ಜೊತೆ ಜೊತೆ ಯಲ್ಲೇ ನಡೆದು ಬಂದಿವೆ. ಮಗಳ ಮದುವೆಯಿಂದ ಪ್ರಭಾವಿತ ಕುಟುಂಬಗಳ ಜೊತೆ ಸಂಬಂಧ ಬೆಳೆಸಲು ಅವಕಾಶವಾಯಿತು. ಆದರೆ ಜಾತಿಗಳು ಅಕಸ್ಮಾತಗಳಾಗಿ ಪರಿವರ್ತನೆಗೊಂಡದ್ದರಿಂದ ಮತ್ತು ಜಾತಿಯಲ್ಲಿ ವಿಪರೀತ ವರ್ಗ ಭಿನ್ನತೆಗಳು ಹುಟ್ಟಿಕೊಂಡಿದ್ದರಿಂದ ಸೂಕ್ತ ಸಂಗಾತಿ ಯನ್ನು ನಿರ್ಧರಿಸುವ ಪ್ರಾಮುಖ್ಯತೆಗಳು ಬದಲಾದವು. ಸಾಮಾಜಿಕ ಸ್ಥಾನಮಾನದ ಕಲ್ಪನೆಗಳು ಅಥವಾ ಉನ್ನತ ಗೋತ್ರದ ಸ್ಥಾನಮಾನ ಇವುಗಳಿಗಿಂತ, ವರನ ನಿಜವಾದ ಅಥವಾ ಗಳಿಸಬಹುದಾದ ಅರ್ಹತೆ ಮದುವೆ ಸಂಬಂಧ ಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಸ್ಥಾನವನ್ನು ಪಡೆ ಯಿತು. ಹೀಗೆ ವಿಶೇಷವಾಗಿ ನಗರಾಧಾರಿತ ಸಮುದಾಯ ಗಳಲ್ಲಿ ಜಾತಿ ಮತ್ತು ಗೋತ್ರಗಳ ಸ್ಥಾನಗಳನ್ನು ಜಾತಿಯ ಆಧುನಿಕ ಮತ್ತು ವಿಶಾಲ ಪಂಗಡ ತೆಗೆದುಕೊಂಡಿತು. ಒಂದು ವೇಳೆ ಹುಡುಗನು ಸಾಮಾಜಿಕ ಅಥವಾ ಗೋತ್ರ ದಲ್ಲಿ ಕೆಳಮಟ್ಟದವನಾಗಿದ್ದರೂ, ಹೆಚ್ಚು ಗಳಿಸುವ ಅರ್ಹತೆ ಪಡೆದಿದ್ದರೆ ಅವನಿಗೆ ಹೆಚ್ಚು ವರದಕ್ಷಿಣೆ ನೀಡ ಲಾಗುತ್ತದೆ. ಈ ರೀತಿ ಒಬ್ಬ ಶಾಲೆ ಶಿಕ್ಷಕನು ಎಷ್ಟೇ ಉತ್ತಮ ಗೋತ್ರದವನಾಗಿದ್ದರೂ ಅವನಿಗಿಂತಲೂ ಬಡಕುಟುಂಬದ, ಕೆಳಮಟ್ಟದ ಧಾರ್ಮಿಕ ಸ್ಥಾನವನ್ನು ಹೊಂದಿರುವ ಒಬ್ಬ ವೈದ್ಯನು ಹೆಚ್ಚು ವರದಕ್ಷಿಣೆ ಪಡೆಯಲು ಅರ್ಹನಾಗಿರುತ್ತಾನೆ.

ನಗರ ಪ್ರದೇಶಗಳಲ್ಲಿ ಭೌಗೋಳಿಕ ಚಾಲನೆಯುತ, ವೈವಾಹಿತ ಜಾಹೀರಾತು ಮತ್ತು ಸಂಗಾತಿ ಹುಡುಕಿ ಕೊಡುವ ಆಧುನಿಕ ಸಂಸ್ಥೆಗಳ ಮೂಲಕ ಮದುವೆಗಳು ಹೆಚ್ಚಾಗಿ ಏರ್ಪಡುತ್ತವೆ. ಇಲ್ಲಿ ಎರಡು ಅಪರಿಚಿತ ಕುಟುಂಬಗಳು ಮದುವೆ ನಂಟಸ್ತಿಕೆಗೆ ಒಳಪಡುತ್ತವೆ. ಈ ಅನಾಮಧೇಯತ್ವವು ಆರ್ಥಿಕವಲ್ಲದ ಕೆಲವು ವಿಷಯ ಗಳಾದ ಶರಾಫತ್ ಹುಡುಗನ ವೈಯಕ್ತಿಕ ಗುಣಗಳು ಮತ್ತು ಅವನ ಕುಟುಂಬ ಹೊಂದಿರುವ ಸಾಮಾಜಿಕ ಗೌರವ ಮುಂತಾದವುಗಳ ಪ್ರಾಮುಖ್ಯತೆಯನ್ನು ಗೌಣ ವಾಗಿಸಲು ಸಹಾಯ ಮಾಡಿದೆ. ಈ ಎಲ್ಲಾ ಅಂಶಗಳು ಆರ್ಥಿಕ ಪ್ರಮಾಣದಿಂದ ಮುಚ್ಚಿಹಾಕಲ್ಪಟ್ಟು ಅವನು ಒಂದೇ ಜಾತಿಯಿಂದ ಬಂದವನು ಎಂದು ಮಾತ್ರ ತಿಳಿಸು ತ್ತದೆ. ಒಂದು ಕುಟುಂಬವು ಡೀಸೆಂಟ್ ಮದುವೆಗೆ ಒಪ್ಪಿದೆ ಎಂದರೆ ಅವರು ಕೈತುಂಬ ವರದಕ್ಷಿಣೆ ಕೊಡು ತ್ತಾರೆ ಎಂದು ಹೇಗೆ ಸೂಚಿಸುತ್ತದೊ ಹಾಗೆ ವಿವಾಹದ ಜಾಹಿರಾತಿನಲ್ಲಿ ಉಪಯೋಗಿಸುವ ಪದ 'ಗೌರವಾನ್ವಿತ'

ಎಂದರೆ ಉತ್ತಮ ಸ್ಥಾನ ಹೊಂದಿರುವ ಮತ್ತು ಆರ್ಥಿಕ ವಾಗಿ ಮುಂದುವರೆದ ಕುಟುಂಬ ಎಂಬುದನ್ನು ಸೂಚಿಸುತ್ತದೆ.

ವರದಕ್ಷಿಣೆಯನ್ನು ಮೂರು ದೃಷ್ಟಿಗಳಿಂದ ನೋಡಲಾಗುತ್ತದೆ.

1. ಬೇಡವಾದ ಮಗಳ ಹೊರೆಯಿಂದ ಮುಕ್ತಿಹೊಂದಲು ಕೊಡುವಂತ ಕಾಣಿಕೆ.
2. ಹುಡುಗನ ಮನೆಯ ಮರ್ಯಾದೆಗೆ ತಕ್ಕಂತೆ ಅಂದರೆ ಅವರ ಸಾಮಾಜಿಕ ಮತ್ತು ಆರ್ಥಿಕ ಮಟ್ಟಕ್ಕೆ ತಕ್ಕಂತೆ ಕಾಣಿಕೆಯನ್ನು ನೀಡುವುದು
3. ಹಿಂದಿನಿಂದ ಬೆಳೆದು ಬಂದ ಸ್ತ್ರೀಧನದ ಕಲ್ಪನೆ ಒಂದು ಕುಟುಂಬವು ಹೆಣ್ಣು ಮಕ್ಕಳಿಗೆ ತವರುಮನೆ ಆಸ್ತಿಯಲ್ಲಿ ಪಾಲು ಕೊಡಬೇಕೆಂದು ಭಾವಿಸುತ್ತದೆ. ಆದರೆ ಈಗ ಆಸ್ತಿ ಪಾಲನ್ನು ಅವಳಿಗೆ ಕೊಡುವುದಕ್ಕೆ ಬದಲಾಗಿ ಅವಳ ಗಂಡನ ಮನೆಗೆ ಕೊಟ್ಟು ಅವಳ ಗಂಡನ ಮನೆಯ ಆಸ್ತಿಯಲ್ಲಿ ಅವಳ ಪಾಲು ಪಡೆಯಲುಹೂಡುವ ಒಂದು ಬಂಡವಾಳ ಎಂದು ಪರಿಗಣಿಸಲಾಗುತ್ತದೆ.

ವರದಕ್ಷಿಣೆ ಮತ್ತು ಮರ್ಯಾದೆ (ಗೌರವ/ಆದರ) ಇವೆರಡರ ಸಂಬಂಧ ಎರಡು ರೀತಿಯಲ್ಲಿ ನಡೆಯುತ್ತದೆ. ದುಂದು ವೆಚ್ಚದ ವರದಕ್ಷಿಣೆ ಕುಟುಂಬದ ಸಾಮಾಜಿಕ ನಿಲುವನ್ನು ಪುಷ್ಟೀಕರಿಸಿ ಅವರ ಮರ್ಯಾದೆಯನ್ನು ಹೆಚ್ಚಿಸುತ್ತದೆ. ಆದರೆ ಕಡಿಮೆ ವರದಕ್ಷಿಣೆ ಕೊಟ್ಟರೆ ಅಥವಾ ತೆಗೆದುಕೊಂಡರೆ ಎರಡು ಕುಟುಂಬಗಳಿಗೆ ಆದ ಅವಮಾನವೆಂದು ಭಾವಿಸಲಾಗುತ್ತದೆ. ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಚೆನ್ನಾಗಿ ನೋಡಿಕೊಂಡರೋ ಇಲ್ಲವೋ ಅನ್ನುವ ಪ್ರಶ್ನೆಯಿಂದಲೇ ಎರಡೂ ಕಡೆಯವರ ನಡುವೆ ಜಗಳ ಉಂಟಾಗುತ್ತದೆ. ಈ ಒಂದು ಅಂಶದಿಂದ ಮರ್ಯಾದೆಗಿಂತ ಆರ್ಥಿಕ ವಿಷಯಗಳು ಹೆಚ್ಚು ಮುಖ್ಯವಾದವು ಎಂಬ ನಂಬಿಕೆ ಹುಟ್ಟಿಕೊಂಡಿತು. ಇದೇ ರೀತಿ ಮಗಳಿಗೆ ವರದಕ್ಷಿಣೆ ಕೊಡಲು ಅವಳ ಅತ್ತೆ ಮಾವನಿಗೆ ಉಡುಗೊರೆ ಕೊಡಲು ಎಷ್ಟು ಖರ್ಚು ಮಾಡುತ್ತಾರೋ ಅಷ್ಟೇ ಹಣವನ್ನು ಹೆಣ್ಣಿನ ಕಡೆಯವರು ಮದುವೆಯ ಅಲಂಕಾರಕ್ಕೆ, ಶಾಮಿಯಾನ ಮತ್ತು ಉಪಕರಣಗಳಿಗೆ ಖರ್ಚು ಮಾಡುತ್ತಾರೆ.

ಮರ್ಯಾದೆ ಪ್ರಶ್ನೆಯಾಗಿ ವರದಕ್ಷಿಣೆ

ಇದಕ್ಕೆ ವಿರುದ್ಧವಾಗಿ ವರದಕ್ಷಿಣೆಯನ್ನು ನಿರಾಕರಿಸಿ ವರದಕ್ಷಿಣೆಯಿಲ್ಲದೆ ಮದುವೆಗೆ ಒಪ್ಪಿಕೊಂಡರೆ ಅಂತಹವರನ್ನು ಹೆಣ್ಣಿನ ಕಡೆಯವರು ಕೀಳಾಗಿ ಮತ್ತು ಅವಮಾನಕರವಾಗಿ ನಡೆಸಿಕೊಳ್ಳುವುದನ್ನು ಎಷ್ಟೋ ಸಂದರ್ಭಗಳಲ್ಲಿ ಕಾಣಬಹುದು. ಬೆಲೆ ಚೀಟಿ (Price tag) ಇಲ್ಲದ ಹುಡುಗನು ಪ್ರಯೋಜನಕ್ಕೆ ಬಾರದವನು ಎಂದು ಭಾವಿಸುತ್ತಾರೆ. ವರದಕ್ಷಿಣೆ ಮಾತುಕತೆಗಳು ಈ ಲೆಕ್ಕಚಾರವನ್ನು ಹಣದ ರೂಪದಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಒಬ್ಬ ವಿಧುರನು ಅಥವಾ ಅನರ್ಹವಾದ ಪುರುಷನು ಎಂತಹ ಕುಟುಂಬದವನೆ ಆಗಿರಲಿ ಅಥವಾ ಒಳ್ಳೆ ಉದ್ಯೋಗದಲ್ಲಿರಲಿ ಹೆಚ್ಚು ವರದಕ್ಷಿಣೆ ಪಡೆಯಲಾರ. ಪತ್ರಿಕೆಗಳಲ್ಲಿ ಬರುವ ವೈವಾಹಿಕ ಜಾಹಿರಾತಿನಲ್ಲಿ ಹುಡುಗನ ಮನೆಯವರು ವರದಕ್ಷಿಣೆ ಬೇಡ ಎಂದು ಹೇಳಿದ್ದರೆ, ಹೆಣ್ಣಿನ ಮನೆಯವರು ಹುಡುಗನಲ್ಲಿಲ್ಲೋ ದೈಹಿಕವಾದ ಅಥವಾ ಬೇರೇನೊ ದೋಷವಿರಬೇಕು ಎಂದು ಹೇಳುವುದನ್ನು ನಾನೇ ಕೇಳಿದ್ದೇನೆ. ವರದಕ್ಷಿಣೆ ಬೇಡ ಎಂದರೆ ಎಲ್ಲಿ ನಮ್ಮನ್ನು ದೋಷವುಳ್ಳವರು ಎಂದು ಕೀಳಾಗಿ ಕಾಣುತ್ತಾರೊ ಎಂಬ ಭಯದಿಂದ ಹುಡುಗನ ಕಡೆಯವರು ವರದಕ್ಷಿಣೆಯಿಲ್ಲದ ಮದುವೆಗೆ ಒಪ್ಪಿಕೊಳ್ಳುವುದಿಲ್ಲ. ಯಾವುದಾದರೂ ಮನೆಯವರು ಈ ಸಂಪ್ರದಾಯವನ್ನು ವಿರೋಧಿಸುವ ಧೈರ್ಯ ಮಾಡಿದರೆ ಅವರಿಗೆ ವರದಕ್ಷಿಣೆ ಬೇಡ ಎಂದು ಹೇಳಬೇಡಿ ಎಂದು ಉಪದೇಶಿಸಬೇಕಾಗುತ್ತದೆ. ಇಲ್ಲದೆ ಅವರಿಗೆ ಗೌರವ ಸಿಗುವುದಿಲ್ಲ. ದುರಾದೃಷ್ಟವಶಾತ್ ವರದಕ್ಷಿಣೆಯಿಲ್ಲದ ಮದುವೆಗೆ ಒಪ್ಪಿಕೊಂಡ ಎಷ್ಟೋ ಮನೆಯವರು ತಮಗಾದ ಕೆಟ್ಟ ಅನುಭವಗಳನ್ನು ಹೇಳುವುದನ್ನು ಕೇಳಬಹುದು.

ಸಮಾಜದಲ್ಲಿ ಜನರ ದುರಾಸೆಯೊಂದೇ ವರದಕ್ಷಿಣೆ ಹೆಚ್ಚಾಗುತ್ತಿರುವುದಕ್ಕೆ ಮುಖ್ಯ ಕಾರಣವಲ್ಲ. ವರದಕ್ಷಿಣೆ ಕೊಡುವವರು ಮತ್ತು ತೆಗೆದುಕೊಳ್ಳುವವರು ಹೆಚ್ಚಾಗಿ ಒಂದೇ ಮನೆಯವರಾಗಿರುತ್ತಾರೆ. ಸ್ವಲ್ಪವಾದರೂ ಗಣನೀಯ ಪ್ರಮಾಣದ ಜನರಲ್ಲಿ ಇದ್ದಕ್ಕಿದ್ದಂತೆ ಮತ್ತು ಅತಿ ವೇಗದಲ್ಲಿ ನಗದು ಆದಾಯ ಹೆಚ್ಚಾಗುತ್ತಿರುವುದು ವರದಕ್ಷಿಣೆ ಹೆಚ್ಚಾಗಲು ಕಾರಣವಾಗಿದೆ. ಹುಡುಗನ ಆರ್ಥಿಕ ಮಟ್ಟದ ಅವಲೋಕನವೇ ವರದಕ್ಷಿಣೆ ಮೊತ್ತ

ವನ್ನು ನಿರ್ಧರಿಸುವುದರಿಂದ ಯಾವ ಮನೆಯವರು ಮದುವೆ ಸಂಬಂಧದಿಂದ ಮೇಲೆ ಬರುವುದಕ್ಕೆ ಪ್ರಯತ್ನಿಸುತ್ತಾರೊ ಅವರೇ ಸಾಮಾನ್ಯವಾಗಿ ಹೆಚ್ಚು ವರದಕ್ಷಿಣೆ ಕೊಡುತ್ತಾರೆ. ಅದೇನೆ ಇರಲಿ ವರದಕ್ಷಿಣೆಯ ದುಂದುವೆಚ್ಚ ಹೆಚ್ಚಾಗುತ್ತಿದೆ ಎಂದೆಲ್ಲಾ ಕೂಗಾಡುತ್ತಿದ್ದರೂ ವರದಕ್ಷಿಣೆಗಾಗಿ ಕೊಡುವ ಮೊತ್ತವು ಗಂಡುಮಕ್ಕಳು ಅನುವಂಶಿಕ ಹಕ್ಕುಬಾದ್ಯತೆಯಿಂದ ಏನು ಪಡೆಯುತ್ತಾರೊ ಅದಕ್ಕಿಂತ ತುಂಬ ಕಡಿಮೆಯಾಗಿರುತ್ತದೆ.

ದುಂದುವೆಚ್ಚದ ವರದಕ್ಷಿಣೆ

ಇದನ್ನು ಕೆಲವು ವಾಸ್ತವಿಕ ಉದಾಹರಣೆಗಳೊಂದಿಗೆ ವಿವರಿಸುತ್ತೇನೆ. ನಮ್ಮ ಪಕ್ಕದ ಮನೆಯಲ್ಲಿ ಕೆಳ ಮಧ್ಯಮ ವರ್ಗಕ್ಕೆ ಸೇರಿದ ಪಂಜಾಬಿ ಕುಟುಂಬವೊಂದಿದೆ. ಕಪೂರ್ ಕುಟುಂಬ ಎಂದು ಕರೆಯೋಣ. ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಎಲ್ಲರಿಗೂ ಮದುವೆಯಾಗಿದೆ. ಶ್ರೀ ಕಪೂರರು ಕಡಿಮೆ ದರ್ಜೆಯ ಸರ್ಕಾರಿ ಕೆಲಸದಲ್ಲಿದ್ದರು. ಕೆಲಸದಲ್ಲಿದ್ದಾಗ ಸಾಕಷ್ಟು ಅನುಕೂಲವಾಗಿದ್ದರು. ನಿವೃತ್ತಿಯಾದ ಮೇಲೆ ಕಪೂರರು ತಮ್ಮ ಮಗನೊಂದಿಗೆ ಮನೆ ಮುಂಭಾಗದಲ್ಲೇ ಒಂದು ಸಣ್ಣ ಚಿಲ್ಲರೆ ಅಂಗಡಿಯನ್ನು ಇಟ್ಟರು. ಇಬ್ಬರು ಹೆಣ್ಣುಮಕ್ಕಳಿಗೂ ಸಾಕಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದಾರೆ. ಇತ್ತೀಚೆಗೆ ನಡೆದ ಎರಡನೆ ಮಗಳ ಮದುವೆಗೆ ಒಂದು ಲಕ್ಷಕ್ಕೂ ಹೆಚ್ಚು ಹಣವನ್ನು ಖರ್ಚುಮಾಡಿದರು, ಇದರಲ್ಲಿ ಮಗಳಿಗೆ ಕೊಟ್ಟ ಬಟ್ಟೆ, ಒಡವೆ ಮಾವನ ಮನೆಯವರಿಗೆ ಕೊಟ್ಟ ಕಾಣಿಕೆ ಮತ್ತು ಆರತಕ್ಷತೆಗೆ ಖರ್ಚು ಮಾಡಿದ ಹಣ ಎಲ್ಲವೂ ಸೇರಿದೆ. ಕೆಳಮಧ್ಯಮ ವರ್ಗಕ್ಕೆ ಸೇರಿದ ಕುಟುಂಬವಾದ್ದರಿಂದ ಎರಡು ಮಕ್ಕಳ ಮಧುವೆ ಮಾಡುವ ಹೊತ್ತಿಗೆ ಸಾಕಷ್ಟು ಕಷ್ಟ ಅನುಭವಿಸಿದರು ಎನ್ನುವುದರಲ್ಲಿ ಸಂಶಯವೆ ಇಲ್ಲ. ತಮ್ಮ ಹೆಣ್ಣುಮಕ್ಕಳಿಗೆ ದುಬಾರಿ ವರದಕ್ಷಿಣೆ ಕೊಡಬೇಕಾಗುವ ಒತ್ತಡಕ್ಕೆ ಒಳಪಡುವ ತಂದೆತಾಯಿಗಳಿಗೆ ಇವರು ಒಳ್ಳೆ ಉದಾಹರಣೆಯಾಗುತ್ತಾರೆ.

ಆದರೆ ಅವರ ಮಗ ಹೆಣ್ಣುಮಕ್ಕಳು ವರದಕ್ಷಿಣೆಯಾಗಿ ಏನು ಪಡೆಯುತ್ತಾರೋ ಅದರ ಮೂವತ್ತರಷ್ಟನ್ನು ಅನುವಂಶಿಕ ಹಕ್ಕುಬಾಧ್ಯತೆಯಿಂದ ಪಡೆಯುತ್ತಾನೆ. ಅವರ ಮನೆಯಿರುವ ಸಣ್ಣ ನಿವೇಶನವೇ ಈಗಿನ ಬೆಲೆಯಲ್ಲಿ 26 ಲಕ್ಷ ಬೆಲೆ ಬಾಳುತ್ತದೆ. ಇತ್ತೀಚೆಗೆ ಅವರು ಮನೆ ಕಟ್ಟುವವರ ಜೊತೆ ಸೇರಿ ನಾಲ್ಕುವರೆ ಅಂತಸ್ತಿನ ಮನೆಯನ್ನು ಆ ಸಣ್ಣ ನಿವೇಶನದಲ್ಲಿ ಕಟ್ಟಿ ಎರಡು ಅಂತಸ್ತನ್ನು ಕಟ್ಟುವವರಿಗೆ ಕೊಟ್ಟು ಉಳಿದೆರಡು ಅಂತಸ್ತನ್ನು ತಾವೆ ಇಟ್ಟುಕೊಂಡಿದ್ದಾರೆ. ಈ ಎರಡು ಅಂತಸ್ತಿನ ಜೊತೆಗೆ ಕೆಳ ಅಂತಸ್ತಿನ ಜಾಗವನ್ನು ಇಟ್ಟುಕೊಂಡು ಅಂಗಡಿಯನ್ನಾಗಿ ಪರಿವರ್ತಿಸಿದ್ದಾರೆ. ಒಂದು ಮನೆ ಬಾಡಿಗೆ ಕೊಟ್ಟು ಇನ್ನೊಂದರಲ್ಲಿ ಅವರೇ ಇದ್ದಾರೆ. ಮಗ ಬಾಡಿಗೆ ಮತ್ತು ಮನೆಯ ಇತರ ಖರ್ಚುಗಳಿಲ್ಲದೆ ತಂದೆ ತಾಯಿಯ ಜೊತೆ ಆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಎಲ್ಲಾ ಆಸ್ತಿ ಮನೆ ಸಾಮಾನುಗಳು ತಂದೆತಾಯಿಯ ಉಳಿತಾಯ ಎಲ್ಲವು ಮಗನಿಗೆ ಹೋಗುತ್ತದೆ. ಹೆಣ್ಣುಮಕ್ಕಳಿಗೆ ಪಾಲು ಸಿಗುವುದಿಲ್ಲ. ತಂದೆ ತಾಯಿಗಳಿಗೆ ವಯಸ್ಸಾದಾಗ ಮಗ ಅವರನ್ನು ನೋಡಿಕೊಳ್ಳಬೇಕಾಗುತ್ತದೆ ಮತ್ತು ಹೆಣ್ಣುಮಕ್ಕಳಿಗೆ ಹಾಗು ಅವರ ಮನೆಯವರಿಗೆ ಆಗಾಗ ಉಡುಗೊರೆಗಳನ್ನು ನೀಡಬೇಕಾಗುತ್ತದೆ. ಇದರಲ್ಲಿ ಸಂಶಯವೆ ಇಲ್ಲ. ಆದರೆ ಸದ್ಯದಲ್ಲಿ ಅವನ ತಂದೆಗೆ 70 ವರ್ಷವಾಗಿದ್ದರೂ ಇನ್ನೂ ಗಟ್ಟಿಯಾಗಿದ್ದು ಸಂಪಾದಿಸುತ್ತಿದ್ದಾರೆ. ಅವರೇನು ಮಗನಿಗೆ ಭಾರವಾಗಿಲ್ಲ. ಅವನ ತಾಯಿ ಕೂಡ ಮೊಮ್ಮಕ್ಕಳನ್ನು ನೋಡಿಕೊಂಡು ಶಿಕ್ಷಕಿಯಾಗಿರುವ ಸೊಸೆಗೆ ಸಹಾಯ ಮಾಡುತ್ತಿದ್ದಾರೆ. ಅದೇನೆ ಇರಲಿ ಮಗ ತಂದೆ ತಾಯಿ ಜೊತೆ ಇರುವುದರಿಂದ ಅವನಿಗೆ ಹೆಚ್ಚು ಅನುಕೂಲವಿದೆ ಏಕೆಂದರೆ ಒಂದು ವೇಳೆ ಅವನೇನಾದರು ಬೇರೆ ಹೋದರೆ ಪ್ರತಿಯೊಂದನ್ನು ಕೊಂಡುಕೊಂಡು ತನ್ನದೆ ಸಂಸಾರವನ್ನು ಪ್ರಾರಂಭಿಸಬೇಕಾಗುತ್ತದೆ. ಕಾನೂನಿನ ಪ್ರಕಾರ ಹೆಣ್ಣು ಮಕ್ಕಳು ಪಡೆಯಬಹುದಾದ ಸುಮಾರು 9 ರಿಂದ 10 ಲಕ್ಷ ರೂಪಾಯಿ ಆಸ್ತಿಯನ್ನು ಪಡೆಯದಿದ್ದರೆ, ಅವರು ಪಡೆಯುವ ವರದಕ್ಷಿಣೆ ಮತ್ತು ಸಣ್ಣ ಸಣ್ಣ ಉಡುಗೊರೆಗಳು ಮಗ ಪಡೆಯುವ ಒಟ್ಟು ಆಸ್ತಿಯಲ್ಲಿ ಒಂದು ಸಣ್ಣ ಮೊತ್ತವಾಗಿರುತ್ತದೆ ಅಷ್ಟೆ.

ಒಂದು ಶ್ರೀಮಂತ ಮನೆಯ ಉದಾಹರಣೆ ತೆಗೆದುಕೊಳ್ಳೋಣ. 1970ರಲ್ಲಿ ನನ್ನ ಗೆಳತಿ ಅನುವಿನ ಮದುವೆಯಾಯಿತು. ಅವಳ ತಂದೆ ಒಬ್ಬ ಶ್ರೀಮಂತ ವ್ಯಾಪಾರಿ. ಅವಳ ಮದುವೆಗೆಂದು ಸುಮಾರು 5 ಲಕ್ಷ ಖರ್ಚು ಮಾಡಿದರು ಆ ದಿನಗಳಲ್ಲಿ ಅದು ಅತ್ಯಂತ

ದೊಡ್ಡ ಮೊತ್ತವಾಗಿತ್ತು. ಮದುವೆಯಾದ ನಂತರವೂ ವರ್ಷ ವರ್ಷ ಬೆಲೆಬಾಳುವ ಉಡುಗೊರೆಗಳನ್ನು ಪಡೆಯುತ್ತಿದ್ದಳು. ತಂದೆ ಆಸ್ತಿಯಲ್ಲಿ ಅವಳಿಗೆ ಯಾವುದೆ ಪಾಲು ಸಿಗುವುದಿಲ್ಲ ಎನ್ನುವುದು ತಿಳಿದಿರುವ ವಿಷಯವೇ ಎಲ್ಲವು ಅವಳ ಇಬ್ಬರು ಸಹೋದರರಿಗೆ ಹೋಗುತ್ತದೆ ಇದರಲ್ಲಿ ಹಲವು ಕೋಟಿ ರೂಪಾಯಿಯ ವ್ಯವಹಾರ ಮತ್ತು ನವದೆಹಲಿಯಲ್ಲಿ ಕಡಿಮೆಯೆಂದರೆ ಎರಡುವರೆ ಕೋಟಿ ರೂಪಾಯಿ ಬೆಲೆಬಾಳುವ ಅರಮನೆಯಂಥ ಮನೆ ಎಲ್ಲವು ಸೇರಿದೆ. ಈ ಮನೆಯು ವ್ಯವಹಾರದಲ್ಲೆ ಬೆಳೆದು ಅದರ ರಾಜಾದಾಯವನ್ನು ಅನುಭೋಗಿಸುತ್ತಿರುವುದರಿಂದ ಇಬ್ಬರು ಗಂಡುಮಕ್ಕಳು ತಂದೆಯೊಂದಿಗೆ ವ್ಯವಹಾರದಲ್ಲಿ ಪಾಲುದಾರರಾಗಿದ್ದಾರೆ.

ಖನ್ನ ಕುಟುಂಬವು ಅನುವಿನ ಮದುವೆಗೆಂದು ಖರ್ಚು ಮಾಡಿದ ಲಕ್ಷ ರೂಪಾಯಿಯನ್ನು ಅನಗತ್ಯ ಖರ್ಚೆಂದು ಪರಿಗಣಿಸಲಾಗುತ್ತದೆ. ವರದಕ್ಷಿಣೆ ವಿರೋಧಿ ಚಳುವಳಿಗಾರರು ಇಂತಹದನ್ನು ರದ್ದುಪಡಿಸಬೇಕೆಂದು ಹೇಳುತ್ತಾರೆ ಹೊರತು ಅನುವಿಗೆ ಸಿಗಬೇಕಾದ ಅನುವಂಶಿಕ ಹಕ್ಕು ಬಾಧ್ಯತೆ ಬಗ್ಗೆ ಅವರು ಗಮನ ನೀಡುವುದಿಲ್ಲ. ಅನುವಿನ ವಿಷಯದಲ್ಲಾಗಲಿ, ಕಪೂರ್ ಕುಟುಂಬದಲ್ಲಾಗಲಿ ದುಂದುವೆಚ್ಚದ ವರದಕ್ಷಿಣೆ ಬಿಟ್ಟರೆ, ಗಂಡು ಮಕ್ಕಳಿಗೆ ಸಿಗುವುದರಲ್ಲಿ ಸ್ವಲ್ಪಭಾಗವೂ ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ.

ಅನೇಕ ರೈತ ಕುಟುಂಬದಲ್ಲಿ ಕಂಡುಬರುವಂತೆ ಬಡ ಕುಟುಂಬಗಳಲ್ಲಿ ದುಬಾರಿ ವರದಕ್ಷಿಣೆ ಬಗೆಗಿನ ದೂರು ನ್ಯಾಯಯುತವಾಗಿರುತ್ತದೆ. ರೈತ ಸಮಾಜದಲ್ಲೂ ಹೆಣ್ಣುಮಕ್ಕಳ ವರದಕ್ಷಿಣೆಗಿಂತ ಗಂಡುಮಕ್ಕಳು ಪಡೆಯುವ ಭೂಮಿ ಮತ್ತು ಇತರ ಸಂಪತ್ತುಗಳು ಹೆಚ್ಚು ಬೆಲೆಯುಳ್ಳದ್ದಾಗಿರುತ್ತವೆ. ಕೃಷಿ ಭೂಮಿಯು ಅದರ ಮಾರಾಟ ಬೆಲೆಗೆ ಸಮನಾಗಿ ನಗದು ಉಳಿತಾಯವನ್ನು ಉತ್ಪಾದಿಸದೆ ಇರುವುದರಿಂದ ಮಗಳ ಮದುವೆ ಸಮಯದಲ್ಲಿ ಭೂಮಿಯನ್ನು ಮಾರಲು ತಂದೆತಾಯಿಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ. ಇದು ನಗರ ಪ್ರದೇಶದಲ್ಲಿ ಸಂಬಳ ತರುವ ಉದ್ಯೋಗಸ್ತರಿಗೂ ಅನ್ವಯಿಸುತ್ತದೆ. ಅಂದರೆ ಹೆಚ್ಚು ಸಂಬಳ ತರುವವನು ಕೂಡ ತನ್ನ ಮಗಳಿಗಿಂತ ಮಗನಿಗೆ ಜಾಸ್ತಿ ಸಂಪತ್ತನ್ನು ಬಿಟ್ಟುಕೊಡುತ್ತಾನೆ. ಅವನು ಒಂದು ಸಾಮಾನ್ಯ ಮನೆಗಿಂತ ಹೆಚ್ಚಿನದೇನನ್ನು ಬಿಟ್ಟು ಹೋಗದಿದ್ದರೂ, ಅದರ ಬೆಲೆಯು ಮಗಳಿಗೆ ಕೊಡುವ ವರದಕ್ಷಿಣೆಗಿಂತ ಹೆಚ್ಚಾಗಿರುತ್ತದೆ.

19ನೇ ಶತಮಾನದಿಂದಲೂ ಸಮಾಜ ಸುಧಾರಕರು ಮಹಿಳೆಯರನ್ನು ಹೆಂಡತಿಯರಾಗಿ ಕ್ರೂರವಾಗಿ ನಡೆಸಿಕೊಳ್ಳುವುದರ ಬಗ್ಗೆ ಹೆಚ್ಚು ಒತ್ತು ಕೊಡುತ್ತಾ ಬಂದಿದ್ದಾರೆ ಮತ್ತು ಹೆಣ್ಣುಮಕ್ಕಳಾಗಿ ಅವರ ಹಕ್ಕುಗಳನ್ನು ಬಲಪಡಿಸದೆ ಗಂಡನ ಮನೆಯಲ್ಲಿ ಮಾತ್ರ ಅವಳಿಗೆ ಸ್ಥಾನ ಬಲಪಡಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ತಂದೆ ತಾಯಿಗಳು ಹೆಣ್ಣು ಮಕ್ಕಳನ್ನು ಬೇರೆ ಮನೆಯವರ ಆಸರೆಯಲ್ಲಿ ಬಿಟ್ಟುಬಿಡುತ್ತಾರೆ. ಗಂಡುಮಕ್ಕಳಿಗೆ ಮಾಡುವಂತೆ ಅವರಿಗೂ ಭವಿಷ್ಯದಲ್ಲಿ ಅನುಕೂಲವಾಗುವಂತೆ ಯಾವುದೆ ಹಣಕಾಸಿನ ಸಹಾಯ ಮಾಡುವುದಿಲ್ಲ ಎಂಬ ವಿಷಯಕ್ಕೆ ಸಾಕಷ್ಟು ಗಮನ ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ನಮ್ಮ ಸಂಸ್ಕೃತಿಯು ಮಹಿಳೆಯರಿಗೆ ಅನುವಂಶಿಕ ಹಕ್ಕುಬಾಧ್ಯತೆ ಸಿಗದಿರುವುದಕ್ಕೆ ಕಾರಣವಾಗಿ ಅದನ್ನು ಪ್ರೋತ್ಸಾಹಿಸುತ್ತದೆ ಮತ್ತು ಅದು ಹೆಣ್ಣು ಮಕ್ಕಳನ್ನು ತವರು ಮನೆಯಲ್ಲಿ ಪೂರ್ಣಸದಸ್ಯರನ್ನಾಗಿ ಯಾವತ್ತು ನಡೆಸಿಕೊಳ್ಳುವುದಿಲ್ಲ. ಮದುವೆ ನಂತರ ಮಗಳು ತವರು ಮನೆಯಲ್ಲಿದ್ದರೆ ಅದೊಂದು ದೊಡ್ಡ ಸಾಮಾಜಿಕ ಅಪಮಾನ ಎಂದು ಪರಿಗಣಿಸಲಾಗುತ್ತದೆ. ಹೆಣ್ಣು ಮಕ್ಕಳ ಮದುವೆ ಮಾಡದಿದ್ದರೆ ಅದಕ್ಕಿಂತ ಹೆಚ್ಚಿನ ಅಪಮಾನ ಆ ಮನೆಗೆ ಉಂಟಾಗುತ್ತದೆ. ಒಂದು ವೇಳೆ ತವರು ಮನೆಯಲ್ಲಿರಬೇಕಾದ ಅಗತ್ಯ ಉಂಟಾದರೆ ಅವಳು ಸಹೋದರರ ವಿಶ್ವಾಸವನ್ನು ಅವಲಂಬಿಸಬೇಕಾಗುತ್ತದೆ.

ಹಿಂದೂ ಉತ್ತರಾಧಿಕಾರ ಕಾನೂನು ಹೆಣ್ಣುಮಕ್ಕಳ ಅನುವಂಶಿಕ ಹಕ್ಕುಬಾದ್ಯತೆಗೆ ಯಾವುದೇ ಭದ್ರತೆಯನ್ನು ಕೊಡುವುದಿಲ್ಲ. ಆದರೆ ವಿಧವೆಯರಾಗಿ ಹೆಂಡತಿಯರ ಹಕ್ಕುಗಳನ್ನು ಸ್ವಲ್ಪಮಟ್ಟಿಗೆ ರಕ್ಷಿಸುತ್ತದೆ. ಒಬ್ಬ ವ್ಯಕ್ತಿ ಬೇರೆಯವರಿಗೆ ಉಯಿಲು ಮಾಡದಿದ್ದರೆ ಮಾತ್ರ ಅವನ ಆಸ್ತಿಯೆಲ್ಲ ಆಟೋಮ್ಯಾಟಿಕ್ಕಾಗಿ ಅವನ ವಿಧವೆ ಹೆಂಡತಿಗೆ ಬರುತ್ತದೆ. ಹೆಣ್ಣುಮಕ್ಕಳಿಗೆ ಅನುವಂಶಿಕ ಹಕ್ಕುಬಾದ್ಯತೆ ಕೊಡದಿರುವುದು ಸಾಮಾನ್ಯವಾಗಿ ಕಂಡು ಬರುವಂತ ಪರಿಸ್ಥಿತಿ. ಆದರೆ ಕೇವಲ ಕೆಲವೇ ಮಂದಿ ಗಂಡಂದಿರು ಹೆಂಡತಿಯರಿಗೆ ಆಸ್ತಿ ಹಕ್ಕು ಕೊಡದೆ ಹೋಗುತ್ತಾರೆ. ಏಕೆಂದರೆ ಹೆಣ್ಣುಮಕ್ಕಳ ಹಕ್ಕುಬಾಧ್ಯತೆಯಂತೆ ಇದನ್ನು

ಸರಿ ಎಂದು ಎಲ್ಲೂ ಪರಿಗಣಿಸುವುದಿಲ್ಲ. ಇದು ಒಂದು ವಿಶೇಷ ಅಸಂಬದ್ಧತೆಯನ್ನು ಉಂಟುಮಾಡುತ್ತದೆ. ವಧುವು ತನ್ನ ಗಂಡನ ಮನೆಯನ್ನು ಪ್ರವೇಶಿಸಿದ ಕ್ಷಣ ದಿಂದಲೆ ತನ್ನ ಗಂಡನ ಆಸ್ತಿಯಲ್ಲಿ ಕಾನೂನಿನ ಪ್ರಕಾರ ಹಕ್ಕನ್ನು ಪಡೆಯುತ್ತಾಳೆ. ನಂತರ ಮಕ್ಕಳಿಲ್ಲದಿದ್ದರೂ ಈ ಹಕ್ಕನ್ನು ಹೊಂದಿರುತ್ತಾಳೆ. ಹೆಣ್ಣುಮಕ್ಕಳ ಹಕ್ಕಿಗಿಂತ ಹೆಂಡತಿಯ ಹಕ್ಕಿಗೆ ಬಲವಾದ ಸಾಮಾಜಿಕ ಮನ್ನಣೆ ಯಿದೆ. ಉದಾ : ಒಬ್ಬ ವ್ಯಕ್ತಿ ಅವಧಿಗೆ ಮೊದಲು ಸತ್ತರೆ ಅವನು ಬೇರೆ ಯಾರನ್ನು ತನ್ನ ಆಸ್ತಿಗೆ ನಿಯುಕ್ತ ರನ್ನಾಗಿ ಮಾಡಿರದಿದ್ದರೆ ಮಾತ್ರ ಅವನ ವಿಮೆ ಪಾಲಿಸಿ ಪ್ರಾವಿಡೆಂಟ್‌ಫಂಡ್ ಎಲ್ಲವು ಅವನ ಹೆಂಡತಿಗೆ ಹೋಗು ತ್ತದೆ. ಸರ್ಕಾರಿ ನಿವೃತ್ತಿ ವೇತನ ಕೂಡ ಅವನ ವಿಧವೆ ಪತ್ನಿಗೆ ಹೋಗುತ್ತದೆ. ಅವನ ತಾಯಿ ಅವಲಂಬಿತ ಳಾದರೂ ಕಾಯಿದೆ ಪ್ರಕಾರ ಅವಳು ಯಾವುದೆ ಹಣ ವನ್ನು ಪಡೆಯಲಾರಳು.

ಹೀಗೆ ಹೊಸದಾಗಿ ಮದುವೆಯಾದ ಹುಡುಗಿ ಕುಟುಂಬದ ಆಸ್ತಿಯಲ್ಲಿ ಗಂಡನ ಪಾಲಿಗೆ ಕಾನೂನಿನ ಪ್ರಕಾರ ಹಕ್ಕುದಾರಳಾಗುವುದರಿಂದ ಗಂಡನ ಮನೆ ಯವರ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರುತ್ತಾಳೆ. ಇದರಿಂದ ಅವಳು ತರುವ ವರದಕ್ಷಿಣೆ ಕೇವಲ ಅವಳ ವೈಯಕ್ತಿಕ ಆಸ್ತಿಯಾಗದೆ ಅವಳ ನಿರ್ವಹಣೆ ವೆಚ್ಚದ ಜೊತೆಗೆ ಭವಿಷ್ಯದಲ್ಲಿ ಕುಟುಂಬದ ಆಸ್ತಿಗೆ ಹಕ್ಕುದಾರ ಳನ್ನಾಗಿ ಮಾಡಲು ಇಡೀ ಕುಟುಂಬದ ಹಣದ ಪೆಟ್ಟಿಗೆಗೆ ತನ್ನ ಪಾಲನ್ನು ಸೇರಿಸಲು ಸಹಾಯ ಮಾಡುತ್ತದೆ. ಆದರೆ ಅವಳು ಏನು ತರುತ್ತಾಳೊ ಅದು ಅವಳು ಹಕ್ಕು ಬಾದ್ಯತೆಯಿಂದ ಪಡೆಯುವುದಕ್ಕಿಂತ ತುಂಬ ಕಡಿಮೆ ಯಾಗುವುದರಿಂದ ಅವಳ ಕಾನೂನು ಬದ್ಧ ಹಕ್ಕುಗಳು ಪ್ರಯೋಜನಕ್ಕೆ ಬಾರದವಾಗುತ್ತವೆ. ಆಸ್ತಿಯ ಹಕ್ಕಿನ ಜೊತೆ ಪೂರ್ಣ ಸದಸ್ಯಳಾಗಬೇಕೆಂದರೆ, ಮದುವೆ ಆದ ಹೊಸದರಲ್ಲಿ ಅವಳು ತನ್ನ ಹೊಸ ಮನೆಗೆ ವಿಧೇಯ ಳಾಗಿರಬೇಕು ಎಂದು ನಿರೀಕ್ಷಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ವಿಶೇಷವಾಗಿ ಮಕ್ಕಳಿಲ್ಲದ ವಿಧವೆಯ ಹಕ್ಕುಗಳು ಹೆಚ್ಚು ದುರ್ಬಲವಾಗುತ್ತವೆ. ಏಕೆಂದರೆ ಗಂಡನ ಮನೆಯಲ್ಲಿ ಅವಳನ್ನು ಸಂಪೂರ್ಣವಾಗಿ ತಮ್ಮ ಮನೆಯವಳು ಎಂದು ಒಪ್ಪಿಕೊಳ್ಳುವ ಅವಕಾಶವಿರುವು ದಿಲ್ಲ. ಹೀಗಾಗಿ ತವರು ಮನೆಗೆ ಹೋಗಬೇಕಾಗುವ ಒತ್ತಡ ಉಂಟಾಗುತ್ತದೆ. ಆದರೆ ಅಲ್ಲೂ ಸಹ ಅವಳ ಹಕ್ಕುಗಳಿಗೆ ಯಾವುದೆ ಭದ್ರತೆಯಿರುವುದಿಲ್ಲ. ಒಂದು ಸಲ ಮದುವೆಯಾಯಿತೆಂದರೆ ಅವರು ಬೇರೊಬ್ಬರ ಜವಾಬ್ದಾರಿಗೆ ಒಳಪಟ್ಟವರು ಎಂದು ತಿಳಿಯಲಾಗುತ್ತದೆ.

ತಾನು ಪ್ರೀತಿಸಿದ ಅಶೋಕನನ್ನು ಮದುವೆಯಾದ ರೀನಾಳ ಕೇಸನ್ನು ತೆಗೆದುಕೊಳ್ಳೋಣ. ಅವರದು ವರದಕ್ಷಿಣೆಯಿಲ್ಲದ ಮದುವೆ. ಮಲ್ಟಿನ್ಯಾಷನಲ್ ಕಂಪನಿ ಯಲ್ಲಿ ಕೆಲಸ ಮಾಡುವ ರೀನಾ ಕೈತುಂಬ ಸಂಪಾದಿಸು ತ್ತಾಳೆ. ಅವಳ ಗಂಡ ಶ್ರೀಮಂತ ಮನೆಯಿಂದ ಬಂದ ವನು. ಆದರೆ ಇವಳು ಮಧ್ಯಮ ವರ್ಗದ ಮನೆಯಿಂದ ಬಂದವಳು. ತಂದೆ ತಾಯಿಗೆ ಹೊರೆಯಾಗದೆ ಅವರಿಗೆ ಹಣಕಾಸಿನ ಸಹಾಯ ಮಾಡುತ್ತಿದ್ದಳು. ಅದರಲ್ಲೂ ತಂದೆಗೆ ಕಾಯಿಲೆಯಾದಾಗ ಔಷದೋಪಚಾರಕ್ಕೆ ಹಣದ ಅಗತ್ಯ ಉಂಟಾದಾಗ ಕೊಡುತ್ತಿದ್ದಳು. ಆದರೆ ಅವಳ ತಂದೆ ಸತ್ತಾಗ, ಮನೆಯು ಸೇರಿದಂತೆ ಇದ್ದ ಅಲ್ಪಸ್ವಲ್ಪ ಆಸ್ತಿಯೆಲ್ಲವು ಇಬ್ಬರು ಗಂಡುಮಕ್ಕಳಿಗೆ ಹೋಯಿತು. ಇದು ರೀನಾಳನ್ನು ಹೆಚ್ಚು ಆಶ್ಚರ್ಯಗೊಳಿಸಿತು. ಏಕೆಂದರೆ ತಾನು ಗಂಡುಮಕ್ಕಳಿಗೆ ಸಮಾನಳೆಂದು ನಂಬಿ ವರದಕ್ಷಿಣೆಯಿಂದ ತಂದೆತಾಯಿಗೆ ಭಾರವಾಗಬಾರದೆಂದು ವರದಕ್ಷಿಣೆಯಿಲ್ಲದ ಮದುವೆಯನ್ನು ಮಾಡಿಕೊಂಡಿದ್ದಳು. ಕೆಲವು ವರ್ಷಗಳಲ್ಲಿ ರಸ್ತೆ ಅಪಘಾತದಲ್ಲಿ ಅವಳ ಗಂಡ ನಂತರ ಮಾವ ಇಬ್ಬರೂ ತೀರಿಕೊಂಡರು. ಮಾವನ ಆಸ್ತಿ ಅವರ ಮಕ್ಕಳಲ್ಲಿ ಭಾಗವಾಗುವುದರಿಂದ ಅವಳ ಗಂಡ ಬದುಕಿದಿದ್ದರೆ ಅವನಿಗೆ ಸಿಗಬಹುದಾಗಿದ್ದ ಆಸ್ತಿಯ ಭಾಗ ತನಗೆ ಬರಬಹುದು ಎಂದು ನಿರೀಕ್ಷಿಸಿದ್ದಳು. ಆದರೆ ಅವಳ ಗಂಡನ ಮನೆಯವರು ಅವಳ ಬೇಡಿಕೆ ಯನ್ನು ಅಸಂಬದ್ಧವಾದುದು ಎಂದು ಭಾವಿಸಿದರು ಏಕೆಂದರೆ

ಎ. ವರದಕ್ಷಿಣೆ ತರುವುದರ ಮೂಲಕ ಅವಳು ಮನೆ ಆಸ್ತಿಗೆ ಏನನ್ನು ಕೂಡಿಸಿಲ್ಲ

ಬಿ. ಇನ್ನೂ ಚಿಕ್ಕ ವಯಸ್ಸಾದ್ದರಿಂದ ಮತ್ತೆ ಮದುವೆ ಯಾಗಿ ತಮ್ಮ ಮನೆ ಆಸ್ತಿಯನ್ನು ಬೇರೆ ಮನೆಗೆ ರವಾನಿಸಬಹುದೆಂದು

ಸಿ. ಅವಳ ಸ್ವಂತ ತಂದೆಯೆ ಮಗಳ ಬಗ್ಗೆ ಚಿಂತಿಸದಿದ್ದ ಮೇಲೆ ನಾವು ಹಾಗೆ ಮಾಡಬೇಕೆಂದು ಅವಳ್ಯಾಕೆ ನಿರೀಕ್ಷಿಸಬೇಕು ? ಆಸ್ತಿಯ ಸ್ವಲ್ಪ ಭಾಗವನ್ನು

ಮೊಮ್ಮಕ್ಕಳಿಗೆ ಕೊಡಲು ಮತ್ತು ಅದನ್ನು ಅವರು ದೊಡ್ಡವರಾಗುವ ತನಕ ಟ್ರಸ್ಟಿನಲ್ಲಿಡಲು ಒಪ್ಪಿಕೊಂಡರು. ಆದರೆ ರೀನಾಳಿಗೆ ಆ ಆಸ್ತಿಯಲ್ಲಿ ಯಾವುದೆ ಪಾಲು ಪಡೆಯಲು ಸಾಧ್ಯವಾಗಲಿಲ್ಲ. ಇಲ್ಲಿ ರೀನಾ ನಿರ್ಗತಿಕಳಲ್ಲ. ಏಕೆಂದರೆ ಅವಳು ಒಳ್ಳೆ ಸಂಬಳ ಪಡೆಯುತ್ತಿದ್ದಾಳೆ; ಅದು ಇಲ್ಲಿ ಮುಖ್ಯವಲ್ಲ. ಅವಳ ತಂದೆ ಮಗಳ ಆಸ್ತಿ ಹಕ್ಕು ಬಾಧ್ಯತೆಯನ್ನು ಒಪ್ಪದಿರುವುದರಿಂದ ಮತ್ತು ಅವಳನ್ನು ಮನೆಯ ಸಂಪೂರ್ಣ ಸದಸ್ಯಳನ್ನಾಗಿ ನೋಡಲು ನಿರಾಕರಿಸುವುದರಿಂದ ಅವಳು ತನ್ನ ಮಾವನ ಮನೆಯಲ್ಲಿ ಆಸ್ತಿಯ ಪಾಲನ್ನು ಕೇಳುವುದು ಅನುಚಿತವಾಗುತ್ತದೆ.

ತಂದೆತಾಯಿಗಳ ಹಿತಾಸಕ್ತಿಯಲ್ಲಿ

ಹೆಣ್ಣು ಮಕ್ಕಳು ಆನುವಂಶಿಕ ಹಕ್ಕು ಬಾಧ್ಯತೆ ಪಡೆಯುವುದು ಕೇವಲ ಮಹಿಳೆಯರ ದೃಷ್ಟಿಯಿಂದ ಮಾತ್ರ ಅಪೇಕ್ಷಣೀಯವಲ್ಲ. ಇದರಿಂದ ವಯಸ್ಸಾದ ತಂದೆ ತಾಯಿಗಳಿಗೂ ಲಾಭವಾಗುತ್ತದೆ. ಹೆಣ್ಣು ಮಕ್ಕಳಿಗೆ ಆನುವಂಶಿಕ ಹಕ್ಕುಬಾಧ್ಯತೆ ಕೊಡದಿರುವ ಸಂಸ್ಕೃತಿಗಳಲ್ಲಿ ಕುಟುಂಬಗಳು ಕಟ್ಟುನಿಟ್ಟಾಗಿ ಪಿತೃಸಂತಾನವಾಗಿರುತ್ತವೆ ಮತ್ತು ವೃದ್ಧ ತಂದೆ ತಾಯಿಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಗಂಡುಮಕ್ಕಳ ಮೇಲೆ ಬಿದ್ದು ಅವರು ಅವರ ಹೆಂಡತಿಯರನ್ನು ಅವಲಂಬಿಸಬೇಕಾಗುತ್ತದೆ. ಹೀಗಾಗಿ ತಂದೆತಾಯಿಗಳು ಮನೆಗೆ ಹೊಸದಾಗಿ ಬಂದ ಬೇರೊಬ್ಬಳ ದಯೆಯಿಂದ ಬಾಳಬೇಕಾಗುತ್ತದೆ. ಇದರಿಂದ ಬಂದವಳಿಗೂ ತನ್ನ ಗಂಡನ ತಂದೆತಾಯಿಗಳ ಜೊತೆ ಭಾವನಾತ್ಮಕ ಸಂಬಂಧವಿರುವುದಿಲ್ಲ. ಸೊಸೆಯರು ಕೂಡ ಯಾವಾಗಲು ಅವರನ್ನು ಬೇಡವಾದ ಹೊರೆ ಎಂದು ತಿಳಿಯುತ್ತಾರೆ. ಹಣಕಾಸಿನ ವಿಚಾರದಲ್ಲಿ ಸಾಕಷ್ಟು ಅನುಕೂಲವಾಗಿರುವ ಮತ್ತು ಆಸ್ತಿಯನ್ನು ತಮ್ಮ ಅಧೀನದಲ್ಲೇ ಇಟ್ಟುಕೊಂಡಿರುವ ತಂದೆ ತಾಯಿಗಳನ್ನು ಕೀಳಾಗಿ ನೋಡಿಕೊಂಡರೆ ಎಲ್ಲಿ ಆಸ್ತಿ ಸಿಗದೆ ಹೋಗುವುದೂ ಎಂದು ಹೆದರಿ ಗಂಡು ಮಕ್ಕಳು ತಂದತಾಯಿಗಳನ್ನು ಗೌರವದಿಂದ ನೋಡಿಕೊಳ್ಳುತ್ತಾರೆ.

ಬಡವರಾದ ಅಥವಾ ತಾವು ಬದುಕಿರುವಾಗಲೆ ತಮ್ಮೆಲ್ಲ ಆಸ್ತಿಯನ್ನು ಗಂಡುಮಕ್ಕಳ ಕೈಗೆ ಕೊಟ್ಟು ತಪ್ಪು ಮಾಡಿದ ತಂದೆ ತಾಯಿಗಳು ಮಕ್ಕಳ ತಾತ್ಸಾರಕ್ಕೆ ಗುರಿಯಾಗುತ್ತಾರೆ. ಹೊಸದಾಗಿ ಮದುವೆಯಾದ ಹುಡುಗಿಗೆ ತನ್ನ ಗಂಡನ ತಂದೆ ತಾಯಿಗಳ ಸೇವೆ ಮಾಡುವ ಒಂದು ಆಂತರಿಕ ಪ್ರೇರಣೆಯಿರುವುದಿಲ್ಲ. ಅದಲ್ಲದೆ ಅವರ ಸೇವೆ ಮಾಡಲು ನಿರಾಕರಿಸುವುದಕ್ಕೆ ಇನ್ನೊಂದು ಕಾರಣವಿದೆ. ಅವಳು ಅಗತ್ಯ ಬಿದ್ದರೆ ತನ್ನ ತಂದೆತಾಯಿಗಳನ್ನು ನೋಡಿಕೊಳ್ಳುವ ಹಕ್ಕು ಇರುವುದಿಲ್ಲ ಅವಳ ತವರು ಮನೆಯ ಸಂಬಂಧ ನಿರ್ಬಂಧಿತವಾಗಿರುತ್ತದೆ. ಎಲ್ಲಿ ಅವಳು ತಂದೆ ಆಸ್ತಿಯಲ್ಲಿ ಪಾಲನ್ನು ನಿರೀಕ್ಷಿಸುತ್ತಾಳೋ ಎಂದು ಅವಳ ಸ್ವಂತ ಸಹೋದರರು ಅವಳು ತಂದೆತಾಯಿಗಳೊಂದಿಗೆ ಸಲಿಗೆಯಿಂದಿರುವುದನ್ನು ತಡೆಯುತ್ತಾರೆ.

ಇಂತಹ ಸಂಗತಿಗಳನ್ನು ನನ್ನ ಅಕ್ಕಪಕ್ಕದ ಮನೆಗಳಲ್ಲಿ ಹತ್ತಿರದಿಂದ ನೋಡಿದ್ದೇನೆ. ಶ್ರೀಮತಿ ಎಂಬುವವಳ ತಾಯಿ ಮದುವೆಯಾದ ಒಬ್ಬರು ಅಣ್ಣಂದಿರೊಂದಿಗೆ ಇದ್ದಾಳೆ. ಅಣ್ಣಂದಿರೊಂದಿಗೆ ಅವಳ ಸಂಬಂಧ ಅಷ್ಟು ಚೆನ್ನಾಗಿಲ್ಲ. ಏಕೆಂದರೆ ಗಂಡುಮಕ್ಕಳು ಮುಂದೆ ತನ್ನನ್ನು ನೋಡಿಕೊಳ್ಳುವರು ಎಂದು ನಂಬಿ ಎಲ್ಲಾ ಆಸ್ತಿಯನ್ನು ಅವರಿಗೆ ಬರೆದುಕೊಟ್ಟಂತ ವಯಸ್ಸಾದ ವಿಧವೆ ತಾಯಿಯನ್ನು ನೋಡಿಕೊಳ್ಳಲು ಅವರ ಹೆಂಡತಿಯರು ನಿರಾಕರಿಸಿದ್ದರಿಂದ ಮನೆಯನ್ನು ತಮ್ಮ ಹೆಸರಿಗೆ ಬರೆಸಿಕೊಂಡ ನಂತರ ತಾಯಿಯು ಅವರಿಗೆ ಹಂಗಿನವಳಾಗಿ ಕಾಣಲಾರಂಭಿಸಿದಳು. ಸೊಸೆಯರೊಂದಿಗೆ ಜಗಳವಾದಾಗಲೆಲ್ಲ ತಾಯಿ ಮಗಳಾದ ಶ್ರೀಮತಿ A ಮನೆಗೆ ಬಂದು ಇಲ್ಲೇ ಇರುತ್ತೇನೆ ಎಂದು ಕೇಳಿಕೊಳ್ಳುತ್ತಾಳೆ. ಆದರೆ ಶ್ರೀಮತಿ Aಗೆ ತಾಯಿಯ ಮೇಲೆ ಕೋಪ ಬರುತ್ತದೆ. ಏಕೆಂದರೆ ಮನೆಯನ್ನು ಬರೆದುಕೊಡುವಾಗ ಮಗಳ ನೆನಪಾಗಲಿಲ್ಲ. ಕಷ್ಟ ಬಂದಾಗ ಮಾತ್ರ ಜ್ಞಾಪಿಸಿಕೊಂಡು ಬರುತ್ತಾಳಲ್ಲ ಎಂದು. ಹೀಗಾಗಿ ವಯಸ್ಸಾದ ಮಹಿಳೆ ಎಲ್ಲಾ ಕಡೆ ಯಾರಿಗೂ ಬೇಡದವಳಾಗಿದ್ದಾಳೆ.

ಭಾರತದಲ್ಲಿ ಅನೇಕ ಕಡೆಗಳಲ್ಲಿರುವಂತೆ ಗಂಡು ಮಕ್ಕಳಿಗೆ ಸಮನಾಗಿ ಅಥವಾ ಇನ್ನೂ ಹೆಚ್ಚಿನ ಹಕ್ಕನ್ನು ಹೊಂದಿರುವ ಹೆಣ್ಣುಮಕ್ಕಳಿರುವ ಮತ್ತು ತವರು ಮನೆಯೊಂದಿಗೆ ಹತ್ತಿರದ ಸಂಬಂಧ ಹೊಂದಿರುವಂತಹ ಸಂಸ್ಕೃತಿಯಲ್ಲಿ ತಂದೆ ತಾಯಿಗಳನ್ನು ತಾತ್ಸಾರವಾಗಿ ಕಾಣುವುದಿಲ್ಲ ಮತ್ತು ಎಲ್ಲಿ ಹೆಣ್ಣುಮಕ್ಕಳು ವಯಸ್ಸಾದ

ತಂದೆ ತಾಯಿಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸ್ವತಂತ್ರರಾಗಿರುತ್ತಾರೋ ಅಂತಹ ಸಂಸ್ಕೃತಿಯಲ್ಲಿ ತಂದೆ ತಾಯಿಗಳು ಸೊಸೆಯನ್ನು ಅವಲಂಬಿಸಿದಾಗ ನೋಡಿಕೊಳ್ಳುವುದಕ್ಕಿಂತ ಚೆನ್ನಾಗಿ ನೋಡಿಕೊಳ್ಳಲಾಗುತ್ತದೆ.

ಆದರೆ ಹೆಣ್ಣುಮಕ್ಕಳಿಗೆ ಅನುವಂಶಿಕ ಹಕ್ಕು ಬಾಧ್ಯತೆ ಕೊಡದಿರುವ ಪಿತೃಸಂತಾನ ಕುಟುಂಬಗಳಲ್ಲಿ ಅತ್ತಿಗೆ ನಾದಿನಿಯರ ಜಗಳ ಭಯಂಕರವಾಗಿರುತ್ತದೆ. ಗಂಡನ ತಂಗಿ ಅನುವಂಶಿಕ ಹಕ್ಕುಬಾಧ್ಯತೆಯಿಲ್ಲದವಳಾಗಿ ಬಂದರೆ ಅಣ್ಣನ ಹೆಂಡತಿ ಅವಳನ್ನು ವೈರಿಯಂತೆ ಬೇಡದ ಹೊರೆಯನ್ನುವಂತೆ ನೋಡುತ್ತಾಳೆ. ಇದರಿಂದಾಗಿ ಅವಳ ಸ್ಥಾನ ಅವಳ ಗಂಡನ ಆಸ್ತಿಯೆಷ್ಟು ಎಂಬುದನ್ನು ಅವಲಂಬಿಸಿರುತ್ತದೆ. ಹೆಂಡತಿಯು ನಾದಿನಿಯ ಹಕ್ಕನ್ನು ಮುರಿದು ಹಾಕಲು ಆತುರಳಾಗಿರುತ್ತಾಳೆ. ಹಾಗೆ ಹುಡುಗನ ತಾಯಿ ಸಹೋದರ ಸಹೋದರಿಯರು ನವವಧುವನ್ನು ಮನೆ ಆಸ್ತಿಯಲ್ಲಿ ತಮ್ಮ ಪಾಲಿಗೆ ಸಂಚಕಾರ ತರುವವಳು ಎಂಬ ದೃಷ್ಟಿಯಿಂದ ನೋಡುತ್ತಾರೆ. ವರದಕ್ಷಿಣೆ ಬಗ್ಗೆ ಒಂದು ತೀವ್ರವಾದ ಟೀಕೆಯೆಂದರೆ ಹಣವು ಮಾವನಿಗೆ ಅಥವಾ ಗಂಡನಿಗೆ ಹೋಗುತ್ತದೆ. ಮತ್ತು ಅದರ ಮೇಲಿನ ಸಂಪೂರ್ಣ ಹಿಡಿತ ಹುಡುಗಿಗಿಂತ ಹೆಚ್ಚಾಗಿ ಹುಡುಗನ ಮನೆಯವರೇ ಹೊಂದುತ್ತಾರೆ. ಯಾಕೆ ಹೀಗೆ ಆಗುತ್ತಿದೆಯೆಂದರೆ ವರದಕ್ಷಿಣೆಯು ಸ್ತ್ರೀ ತನ್ನ ಗಂಡನ ಮನೆಯ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಕೊಂಡುಕೊಳ್ಳುವ ಉದ್ದೇಶವನ್ನು ಪೂರೈಸುತ್ತದೆ. ಒಂದು ವೇಳೆ ಹೆಣ್ಣು ಮಕ್ಕಳು ಗಂಡು ಮಕ್ಕಳ ರೀತಿಯಲ್ಲೇ ಮತ್ತು ಅಷ್ಟೇ ಮೊತ್ತದಲ್ಲಿ ಆಸ್ತಿ ಪಡೆದರೆ ಅವರು ಗಂಡನ ಮನೆಯನ್ನು ಪರಾವಲಂಬಿಯಾಗಲ್ಲದೆ ಸಮಾನ ಪಾಲುದಾರಳಾಗಿ ಪ್ರವೇಶಿಸಬಹುದು. ಅಂತಹ ಮಹಿಳೆ ಆಸ್ತಿಯನ್ನು ತನ್ನ ಹೆಸರಿನಲ್ಲಿ ಇಟ್ಟುಕೊಳ್ಳಬಹುದು.

ಒಂದು ವೇಳೆ ಮಹಿಳೆಯು ಪರಾವಲಂಬಿಯಾಗಿ ಅಥವಾ ಅನುವಂಶಿಕ ಹಕ್ಕುಬಾಧ್ಯತೆಯಿಲ್ಲದ ಮಗಳಾಗಿ ಮಾವನ ಮನೆಗೆ ಹೋದರೆ ಅಲ್ಲಿ ಅವಳಿಗೆ ಸಮಾನತೆಯಿರುವುದಿಲ್ಲ. ತಂದೆತಾಯಿಗಳು ಹೆಣ್ಣು ಮಕ್ಕಳನ್ನು ಹೊರೆಯೆಂಬಂತೆ ನೋಡಿಕೊಂಡರೆ ಮತ್ತು ಗಂಡು ಮಕ್ಕಳಿಗೆ ಮಾಡುವ ಹಾಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತೆ ಅವರನ್ನು ಸಜ್ಜುಗೊಳಿಸದಿದ್ದರೆ, ಹೆಣ್ಣು ಮಕ್ಕಳು ಹೆಂಡತಿಯರಾಗಿ ಬಲಗೊಳ್ಳಲು ಸಾಧ್ಯವಿಲ್ಲ. ಒಬ್ಬ ತಂದೆಯು ಮಗಳನ್ನು ಅವಳ ಸಹೋದರನೊಂದಿಗೆ ಸಮಾನವಾಗಿ ನಡೆಸಿಕೊಳ್ಳದಿರುವಾಗ ಮತ್ತು ಸಮಾನ ಹಕ್ಕುದಾರಳು ಎಂದು ಪರಿಗಣಿಸದೆ ಇರುವಂತ ಸಂದರ್ಭದಲ್ಲಿ ಮದುವೆ ಮುರಿದು ಹೋದಾಗ ಮಗಳ ಗಂಡನಿಗೆ ಅರ್ಧ ಆಸ್ತಿ ಕೊಡು ಎಂದು ಹೇಳುವುದು ಅಥವಾ ಅತ್ತೆ ಮಾವನ ಹತ್ತಿರ ವಿಧವೆ ಸೊಸೆಗೆ ಆಸ್ತಿಯನ್ನು ಕೊಡಿ ಎಂದು ಹೇಳುವುದು ಹಾಸ್ಯಾಸ್ಪದವಾಗುತ್ತದೆ.

ತವರು ಮನೆ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಸಮಾನ ಮತ್ತು ಸ್ಥಳಾಂತರಿಸಲು ಸಾಧ್ಯವಿಲ್ಲದ ಅನುವಂಶಿಕ ಹಕ್ಕು ಬಾಧ್ಯತೆಗೆ ಅದರಲ್ಲೂ ವಿಶೇಷವಾಗಿ ತವರ ಮನೆಯಲ್ಲಿ ವಾಸಿಸುವ ಮತ್ತು ವೃದ್ಧಾಪ್ಯದಲ್ಲಿ ತಂದೆ ತಾಯಿಗಳನ್ನು ನೋಡಿಕೊಳ್ಳುವ ಹಕ್ಕುಗಳನ್ನು ಪಡೆಯುವುದಕ್ಕೆ ನಮ್ಮ ಹೋರಾಟ ಹೆಚ್ಚಿನ ಗಮನ ನೀಡಬೇಕು. ಯಾವಾಗ ತಂದೆ ತಾಯಿಗಳು ತಮ್ಮ ವೃದ್ಧಾಪ್ಯದಲ್ಲಿ ಭದ್ರತೆ ಕೊಡುವುದರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಹೆಚ್ಚು ಸಮರ್ಥರು ಎಂದು ನೋಡುತ್ತಾರೊ ಮತ್ತು ಗಂಡು ಮಕ್ಕಳಿಗೆ ಕೊಡುವಷ್ಟೇ ಆರ್ಥಿಕ ಭದ್ರತೆಯನ್ನು ಇವರಿಗೂ ಕೊಡುತ್ತಾರೊ ಆವಾಗ ಮಹಿಳೆಯರನ್ನು ಅಪಮೌಲ್ಯಗೊಳಿಸುವ ಸಂಸ್ಕೃತಿಯನ್ನು ಪ್ರತಿಭಟಿಸಬಹುದು. ಹೆಣ್ಣು ಮಕ್ಕಳಿಗೆ ಅನುವಂಶಿಕ ಹಕ್ಕು ಬಾಧ್ಯತೆಯ ಭರವಸೆ ನೀಡದೆ ಕೇವಲ ವರದಕ್ಷಿಣೆಯನ್ನು ಕಾನೂನು ವಿರೋಧ ಎಂದು ಮಾಡಿದರೆ ಅದು ಹೆಣ್ಣು ಮಕ್ಕಳನ್ನು ಇನ್ನೂ ಹೆಚ್ಚು ದುರ್ಬಲರನ್ನಾಗಿ ಮಾಡುತ್ತದೆ.

ಮೂಲ : ಮಧುಕೀಶ್ವರ್ – 'ಮಾನುಷಿ'ಯಲ್ಲಿ ಪ್ರಕಟವಾದ 'Dowry Calculution' ಲೇಖನದ ಅನುವಾದ.

ಅನುವಾದ : ಹೇಮಲತ ಎಚ್. ಎಂ., ಮೈಸೂರು

ಚಿಪ್ಕೊ ಮಹಿಳೆಯರ ದೃಷ್ಟಿಯಲ್ಲಿ ಸ್ವಾತಂತ್ರ್ಯ

ಅಂದು 1986ರ ನವೆಂಬರ್ ತಿಂಗಳ 30ನೇ ತಾರೀಖು ದೂನ್ ಕಣಿವೆಯ ನಹಿ-ಕಲಾ ಎಂಬ ಹಳ್ಳಿಯ ಚಾಮುಂಡೇಯಿ ಕಾಡಿನಲ್ಲಿ ಉರುವಲು ಕಟ್ಟಿಗೆ ಸಂಗ್ರಹಿಸುತ್ತಿದ್ದಳು. ಅವಳಿಗೆ ಬೆಟ್ಟದ ಸುಣ್ಣದ ಕಲ್ಲಿನ ಗಣಿ ಪ್ರದೇಶಕ್ಕೆ ಹೋಗುತ್ತಿದ್ದ ಟ್ರಕ್ಕುಗಳ ಸದ್ದು ಕೇಳಿಸಿತು. 1986ರ ಸೆಪ್ಟೆಂಬರ್‌ನಿಂದ ಥಾನೊ ಪ್ರದೇಶದ ಗ್ರಾಮೀಣರು ಗಣಿಗೆ ಹೋಗುವ ರಸ್ತೆಯಲ್ಲಿ ಚಿಪ್ಕೊ ಶಿಬಿರದಳ ಆರಂಭಿಸಿದ್ದರು. ಇದರ ಉದ್ದೇಶ ಆ ಪ್ರದೇಶದ ಪರಿಸರ ನಾಶ ಮಾಡಿದ್ದ ಗಣಿಕಾಮಗಾರಿಯನ್ನು ನಿಲ್ಲಿಸುವುದೇ ಆಗಿತ್ತು. ಯಾವುದೇ ಟ್ರಕ್ಕುಗಳು ಅಲ್ಲಿಗೆ ಬರುವಂತಿರಲಿಲ್ಲ. ಈ ಪ್ರತಿಭಟನಾಕಾರರ ಮೇಲೆ ಗಣಿಕಾರ್ಮಿಕರು ಹಲ್ಲೆ ಮಾಡಿದ್ದರು; ಅವರು ತಡೆಗಟ್ಟಿ ಹಾಕಿದ್ದ ಸ್ಥಳದಿಂದ ಹೊರ ತಳ್ಳಿದ್ದರು: ಟ್ರಕ್ಕುಗಳನ್ನು ಓಡಿಸಿದ್ದರು.

ಚಾಮುಂಡೇಯಿ ಕೂಡಲೆ ತನ್ನ ಕತ್ತಿಯನ್ನೆಸೆದು ಇಳಿಜಾರಿನಲ್ಲಿ ಒಂದೇ ಉಸಿರಿಗೆ ಓಡಿದಳು. ಹತ್ತುತ್ತಿದ್ದ ಟ್ರಕ್ಕುಗಳಿಗೆ ಎದುರಾಗಿ ನಿಂತಳು. ತನ್ನ ಹೆಣದ ಮೇಲೆ ಮಾತ್ರ ಹೋಗಲು ಸಾಧ್ಯ ಎಂದು ಟ್ರಕ್ಕುಗಳ ಚಾಲಕರಿಗೆ ತಿಳಿಸಿದಳು. ಅವಳನ್ನು ಸ್ವಲ್ಪದೂರ ಎಳೆದಾಡಿದ ನಂತರ ಅವರು ನಿಂತರು; ಟ್ರಕ್ಕುಗಳನ್ನು ಹಿಂತಿರುಗಿಸಿದರು.

1987ರ ಏಪ್ರಿಲ್‌ನಲ್ಲಿ ಕೂಡ ನಹಿಕಲಾದ ಜನರು ಪ್ರತಿಭಟಿಸುವುದನ್ನು ಮುಂದುವರೆಸಿದ್ದರು. ಕಾರಣ, ಅಲ್ಲಿಯ ಸರಕಾರ 1982ರಲ್ಲೇ ಒಪ್ಪಂದದ ಅವಧಿ ಮುಗಿದಿದ್ದರೂ ಗಣಿಯನ್ನು ಮುಚ್ಚಿಸಲು ನಿಧಾನಿಸುತ್ತಿತ್ತು. ಈ ಗಣಿಕಾಮಗಾರಿಕೆ 1986ರ ಅರಣ್ಯರಕ್ಷಣಾ ಕಾಯಿದೆಯ ಸಂಪೂರ್ಣ ಉಲ್ಲಂಘನೆಯಾಗಿತ್ತು. ಸರಕಾರ ತನ್ನದೇ ಕಾನೂನನ್ನು ಪಾಲಿಸಲು ಸಂಪೂರ್ಣವಾಗಿ ಸೋತದ್ದೇ ಜನತೆ ನೇರವಾಗಿ ಕಣಕ್ಕಿಳಿಯಲು ಕಾರಣವಾಗಿತ್ತು. ಇಪ್ಪರ ಮಧ್ಯೆ ಗಣಿಯ ಕಂಟ್ರಾಕ್ಟರು ಕಾನೂನನ್ನು ತನ್ನ ಕೈಗೆ ತೆಗೆದುಕೊಳ್ಳಲು ಪ್ರಯತ್ನಿಸಿದ. 1987ರ ಮಾರ್ಚಿ 20ರಂದು 200 ಮಂದಿ ಗೂಂಡಾಗಳನ್ನು ಅಲ್ಲಿಗೆ ಕರೆತಂದ. ಅವರು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಪ್ರತಿಭಟನಕಾರರನ್ನು ಕಲ್ಲು ಮತ್ತು ಕಬ್ಬಿಣದ ಸರಳುಗಳಿಂದ ಹೊಡೆದರು. ಆದರೆ ಮಕ್ಕಳು, ಮಹಿಳೆಯರು ಹಾಗೂ ಪುರುಷರು ಅಲ್ಲಿಂದ ಕದಲಲಿಲ್ಲ. ಅವರು ತಮಗೆ ತಾವೇ ಮುಂದಾಳಾಗಿದ್ದರು; ನಿರ್ಧಾರ ತೆಗೆದುಕೊಳ್ಳುವವರಾಗಿದ್ದರು; ತಮ್ಮ ಶಕ್ತಿಯ ಸೆಲೆ ತಾವೇ ಆಗಿದ್ದರು. ಚಳುವಳಿಗಳು ಹೊರಗಿನವರ ಆಕರ್ಷಕ ವ್ಯಕ್ತಿತ್ವದ ನಾಯಕರಿಂದ ಹುಟ್ಟಿಕೊಳ್ಳುತ್ತವೆ, ಜೀವಂತವಾಗಿರುತ್ತವೆ ಎನ್ನುವ ನಂಬಿಕೆಯನ್ನು ನಹಿ-ಕಲದ ಅಹಿಂಸಾತ್ಮಕ ಹೋರಾಟ ಸುಳ್ಳು ಮಾಡಿತ್ತು. ಈ ಚಳುವಳಿಯಲ್ಲಿ ಇತವಾರಿದೇವಿ ಚಾಮುಂಡೇಯಿ ತಮ್ಮ ಅಸಾಧಾರಣ ಶಕ್ತಿಯಿಂದಾಗಿ ಸ್ಥಳೀಯ ನೇತೃತ್ವವನ್ನು ವಹಿಸಿದ್ದರು. ಅವರಂಥ ಮಹಿಳೆಯರ ಅದೃಶ್ಯ ಶಕ್ತಿಯೇ ಚಿಪ್ಕೋದ ನಿರಂತರ ಶಕ್ತಿಯ ಮೂಲವಾಗಿತ್ತು. ಈ ಚಳುವಳಿ ತನ್ನ ಎರಡು ದಶಕಗಳ ನಿರಂತರ ಚಟುವಟಿಕೆಗಳಲ್ಲಿ ವಿಕಾಸ ಹೊಂದುತ್ತಾ ಮರಗಳನ್ನು ಅಪ್ಪಿಕೊಳ್ಳುವುದರಿಂದ ಆರಂಭವಾಗಿ ಜೀವಂತ ಬೆಟ್ಟಗುಡ್ಡಗಳು ನದಿ ನೀರನ್ನು ಅಪ್ಪಿಕೊಳ್ಳುವವರೆಗೆ ವಿಸ್ತೃತಗೊಂಡಿದೆ, ಚಿಪ್ಕೋದ ಪ್ರತಿ ಹಂತವೂ ಅದೃಶ್ಯ ಮಹಿಳೆಯರಿಂದ ಸೃಷ್ಟಿಗೊಂಡಿದೆ. 1977ರಲ್ಲಿ ಅದ್ವಾನಿ ಎಂಬಲ್ಲಿಯ ಬಚನಿದೇವಿ ಚಿಪ್ಕೋದ ಇಕೋ ಘೋಷಣೆಯನ್ನು ರಚಿಸಿದಳು.

'ಕಾಡುಗಳು ಕೊಡುತ್ತವೆ ಏನನ್ನು ?
ಮಣ್ಣು, ನೀರು, ಗಾಳಿಯನ್ನು'

ಒಂದು ದಶಕದ ನಂತರ ಚಿಪ್ಕೊ ಕವಿ ಘನಶ್ಯಾಮ 'ಶೈಲಾ'ನಿಗೆ ಒಂದು ಹೊಸ ಹಾಡನ್ನು ಬರೆಯಲು ದೂನ್ ಕಣಿವೆಯ ಚಾಮುಂಡೇಯಿ ಸ್ಫೂರ್ತಿ ನೀಡಿದಳು.

ಕೇಳು ಸೋದರಿ
ಸತ್ಯದ ಹೋರಾಟಕ್ಕೆ
ಹಕ್ಕುಗಳ ಹೋರಾಟಕ್ಕೆ

ನಾಂದಿಯಾಗಿದೆಯಿಲ್ಲಿ
ಸಿನ್‌ಸ್ಕೈರು ಖಲಾದಲ್ಲಿ
ಮಲ್‌ಕೋಟ್ ಥಾನಾದಲ್ಲಿ

ನಿನ್ನೆದೆ ಮಿಡಿಯಲಿ
ನಮ್ಮ ಬದುಕಿಸುವ
ಜೀವಂತ ನದಿ-ಬನಗಳಿಗೆ

ಏಳು ಸಿಡಿದೇಳು
ನಮ್ಮ ಬೆಟ್ಟಗುಡ್ಡಗಳ ಕೊರೆದು
ಕಾಡುಮೇಡುಗಳ ನಿರ್ನಾಮಗೊಳಿಸುವ
ನದಿ-ತೊರೆಗಳ ಬತ್ತಿಸುವ
ನೀಚತನದೆದುರು
ಬದುಕಿನ ಹೋರಾಟಕ್ಕೆ
ನಾಂದಿಹಾಡಿದೆಯಿಲ್ಲಿ
ಸಿನ್‌ಸ್ಯಾರು ಖಾಲಾದಲ್ಲಿ

ಚಿಪ್ಕೊ ಬಳಗದ ಸಭೆಯೊಂದು ಮಾರ್ಚ 29ರಂದು ನಡೆದಿತ್ತು. ನಾನು ಚಾಮುಂಡೇಯಿ ಮತ್ತು ಇತವಾರಿ ದೇವಿಯರೊಂದಿಗೆ ಒಂದು ದಿನ ಕಳೆದ. ಅವರ ಸುಪ್ತ ಶಕ್ತಿಗಳ, ಪ್ರಕೃತಿಯ ಸುಪ್ತಶಕ್ತಿಗಳ ಬಗ್ಗೆ ತಿಳಿಯುವುದೇ ನನ್ನ ಉದ್ದೇಶವಾಗಿತ್ತು. ನಮ್ಮ ಅನುಭವಗಳ ಪರಸ್ಪರ ವಿನಿಮಯದ ಕೆಲವು ತುಣುಕುಗಳು ಇಲ್ಲಿವೆ :

ವಂದನಾ

ನಹಿಕಲಾದಲ್ಲಿ ಸುಣ್ಣದ ಕಲ್ಲಿನ ಗಣಿಯಿಂದಾಗಿ ಯಾವ ರೀತಿಯ ಹಾನಿಯುಂಟಾಗಿದೆ ?

ಚಾಮುಂಡೇಯಿ

ನಾನು ಹದಿನೇಳು ವರ್ಷಗಳ ಹಿಂದೆ ನಹಿಗೆ ಬಂದಾಗ ಅರಣ್ಯಗಳು ದಟ್ಟವಾಗಿ, ಸಂಪದ್ಭರಿತವಾಗಿದ್ದವು. ಅಲ್ಲಿ ನಮ್ಮ ಜಲಸಂಪನ್ಮೂಲಗಳು ಅರಣ್ಯಗಳಿಂದ ಪೋಷಿಸಲ್ಪಟ್ಟದ್ದವು. ಈಗ ಅವು ಬತ್ತಿಹೋಗಿವೆ. ಹನ್ನೆರಡು ವಸಂತಗಳು ಬೆಟ್ಟ ಬೇಸಿಗೆಯಾಗಿವೆ. ಎರಡು ವರ್ಷಗಳ ಹಿಂದೆ ಪಟಾಲಿ - ಕ - ಥರ್‌ನಲ್ಲಿ ಹುಟ್ಟಿ ಸಿನ್‌ಸ್ಯಾರು ಖಲಾವನ್ನು ಪೋಷಿಸುತ್ತಿದ್ದ ನಿರಂತರವಾಗಿ ಧುಮುಕುವ ಜಲಪಾತವಾದ ಮಂಡ - ಕ - ಚರಾ ಈಗ ಬತ್ತಿ ಹೋಗಿದೆ. ನಮ್ಮ ಜೀವಸೆಲೆಯಾದ ಅರಣ್ಯಗಳನ್ನು ನದಿ - ತೊರೆಗಳನ್ನು ಗಣಿಕಾಮಗಾರಿಕೆ ನಾಶಮಾಡುತ್ತಿದೆ. ಇದರಿಂದಲೇ ನಮ್ಮ ನದಿ - ಅರಣ್ಯಗಳನ್ನು ರಕ್ಷಿಸಲು ನಮ್ಮ ಪ್ರಾಣಗಳನ್ನೂ ಕೊಡಲು ಸಿದ್ಧರಾಗಿದ್ದೇವೆ.

ಇತವಾರಿ

ಸಿನ್‌ಸ್ಯಾರು - ಕ - ಖಲಾ ಹುಲುಸಾಗಿ ಬೆಳೆದ ಪೊದೆಗಳು ತುಂಬಿದ ಇಕ್ಕಟಾದ ಸತತವಾಗಿ ಹರಿಯುವ ಒಂದು ತೊರೆ ಆಗಿತ್ತು. ಆದರೆ ಇಂದು ಬರೀ ಸುಣ್ಣದ ಕಲ್ಲಿನ ಗುಂಡುಕಲ್ಲುಗಳು ತುಂಬಿದ ದೊಡ್ಡ ಒಣಗಿದ ಬಯಲು ಆಗಿದೆ. ನಮ್ಮ ನೀರು, ಜಲಯಂತ್ರಗಳು, ಕಾಡುಗಳು, ಗದ್ದೆಗಳೆಲ್ಲಾ ಗಣಿಕಾಮಗಾರಿಕೆಯಿಂದಾಗಿ ನಾಶವಾಗಿವೆ. ಗುಜ್ರಾಲ್ ಮೊಟ್ಟಮೊದಲಿಗೆ ಇಲ್ಲಿಗೆ ಬಂದಾಗ ಚಿಂದಿಬಟ್ಟೆ ತೊಟ್ಟಿದ್ದು ನನಗೆ ನೆನಪಿದೆ. ನಾನು ವಾಟರ್‌ಮಿಲ್ಲಿಗೆ ಹಿಟ್ಟು ಮಾಡಿಸಲು ಬಂದಿದ್ದೆ. ಗುಜ್ರಾಲ್ ಒಂದು ಹಳೆಯ ಟ್ರಕ್ಕಿನಲ್ಲಿ ಬಂದಿದ್ದ. ಅವನ ಊಟವೆಂದರೆ, ಒಣಚಪಾತಿ ಮತ್ತು ಹಸಿ ಈರುಳ್ಳಿ ಆಗಿತ್ತು. ಆದರೆ 26 ವರ್ಷಗಳವರೆಗೆ ನಮ್ಮ ಬೆಟ್ಟವನ್ನು ಲೂಟಿ ಮಾಡಿದ ಅವನು ಇಂದು ಹನ್ನೆರಡು ಟ್ರಕ್ಕುಗಳ ಒಡೆಯ. ನಮ್ಮ ಮೇಲೆ ಧಾಳಿ ಮಾಡಲು ಗೂಂಡಾಗಳ ದಂಡನ್ನೇ ಬಾಡಿಗೆಗೆ ತರಬಲ್ಲವನಾಗಿದ್ದಾನೆ. ನಮ್ಮ ಬೆಟ್ಟವನ್ನು ಕೊರೆಯಲು ಕೂಲಿಗಳ ಹಿಂಡನ್ನೇ ಕೊಳ್ಳಬಲ್ಲವನಾಗಿದ್ದಾನೆ. ಅವನ ಗಣಿ ಕೆಲಸ ನಿಲ್ಲಿಸಲು ಏಳು ತಿಂಗಳುಗಳಿಂದ ನಾವು ರಸ್ತೆಯಲ್ಲಿ ಧರಣಿ ಹೂಡಿದ್ದೇವೆ. ನಮ್ಮನ್ನು ಗಾಯಗೊಳಿಸುವ, ಕೊಲ್ಲುವ ಬೆದರಿಕೆಯ ಪ್ರಯತ್ನಗಳು ಹೆಚ್ಚುತ್ತಲೇ ಇವೆ.

ಮೊದಲು ಸುಣ್ಣದ ಕಲ್ಲುಗಳನ್ನು ನದಿ ತೀರದಿಂದ ಆಯ್ದುಕೊಳ್ಳುತ್ತಿದ್ದ. ನಂತರ ಬೆಟ್ಟ ಹತ್ತಿದ. ಹತ್ತು ವರ್ಷಗಳಿಂದ ಗಣಿಕೆಲಸವನ್ನು ಮಾಡಿಸುತ್ತಲೇ ಇದ್ದಾನೆ. ಶ್ರೀಮಂತವಾಗಿದ್ದ ಹಾಗೂ ಉತ್ಪಾದಕವಾಗಿದ್ದ ಬೆಟ್ಟವನ್ನು ಮರಳುಗಾಡಾಗಿಸಿದ್ದಾನೆ. ಸಿನ್‌ಸ್ಯಾರಿನ ಆಗರವಾಗಿದ್ದುದನ್ನು ಬರಡಾಗಿಸಿದ್ದಾನೆ. ಆಗ ನಾವು ನಿರ್ಧರಿಸಿದೆವು. ನಮ್ಮ ಮಕ್ಕಳು ಬದುಕಬೇಕೆಂದಿದ್ದರೆ ಈ ಗಣಿಯನ್ನು ಮುಚ್ಚಿಸಬೇಕು.

ಇದಕ್ಕಾಗಿ ನಮ್ಮೊಂದಿಗೆ ದುಡಿಯುತ್ತಿರುವ, ಈಗ ಮಹಿಳಾ ಮಂಡಲಗಳೊಂದಿಗೆ ಕೆಲಸ ಮಾಡುತ್ತಿರುವ ಯುವಕ ಮಂಡಲಗಳು ಯುವಕರು ಈ ಗುಜ್ರಾಲ್

ನಮ್ಮ ಹಳ್ಳಿಗೆ ಬಂದಾಗ ಇನ್ನೂ ಆರು ತಿಂಗಳ ಅಥವಾ ಒಂದು ವರ್ಷದ ಕೈಗೂಸುಗಳು. ಇವರು ಗುಜ್ರಾಲನು ನಮ್ಮ ಭೂಮಿ ಮತ್ತಿತರ ಸಂಪನ್ಮೂಲಗಳ ಬಗ್ಗೆ ತನ್ನದೇ ಆಸ್ತಿ ಎನ್ನುವಂತೆ ನಡೆದುಕೊಳ್ಳುತ್ತಿರುವುದನ್ನು ತಮ್ಮ ಬಾಲ್ಯದಿಂದಲೂ ಕಂಡಿದ್ದಾರೆ. ಗ್ರಾಮಸಭೆಯಲ್ಲಿ ಗಣಿ ಕೆಲಸ ಮಾಡಲು ಗೌರವಧನ ಕೊಡುವಂತೆ ಈ ಯುವಕರು ಒತ್ತಾಯಿಸಿದಾಗಲೇ ಚಿಪ್ಕೊ ವಿರೋಧ ಆರಂಭವಾಯಿತು. ಅವರಿಗೆ ಗುಜ್ರಾಲನು, "ನಾನು ಎಸೆದ ರೊಟ್ಟಿಯ ಚೂರುಗಳಿಂದ ಬೆಳೆದಿದ್ದೀರಿ. ನನ್ನಿಂದ ಗೌರವಧನ ಕೇಳಲು ನಿಮಗೆಷ್ಟು ಧೈರ್ಯ ?" ಎಂದು ಕೇಳಿದ. ಆಗ ಈ ಯುವಕರು, "ನಾವು ನಮ್ಮ ತಾಯಂದಿರ ಪೋಷಣೆಯಿಂದ ಬೆಳೆದಿದ್ದೇವೆ. ಈ ಬೆಟ್ಟಗಳು, ಅರಣ್ಯಗಳು, ನದಿಗಳು ನಮ್ಮ ತಾಯಂದಿರಂತೆ. ನಮ್ಮ ಬದುಕಿಗೆ ಆಧಾರ ಸ್ತಂಭಗಳಾದ ಇವುಗಳನ್ನು ನೀನು ನಾಶಮಾಡುವುದಕ್ಕೆ ಬಿಡುವುದಿಲ್ಲ. ಗಣಿಪ್ರದೇಶಕ್ಕೆ ನಿನ್ನ ಟ್ರಕ್ಕುಗಳು ಹೋಗಕೂಡದು' ಎಂದರು.

ಚಾಮುಂಡೇಯಿ

ಮಾರ್ಚಿ 20ರಂದು ಗುಜ್ರಾಲನ ಟ್ರಕ್ಕು ಬರುತ್ತಿರುವುದನ್ನು ಕಂಡೆವು. ಅದರಲ್ಲಿದ್ದ ಕೆಲವರು ಸತ್ಯಾಗ್ರಹ ಶಿಬಿರದಲ್ಲಿದ್ದವರನ್ನು ತಳ್ಳಾಡಿದರು. ಅಷ್ಟರಲ್ಲಿ ಮಹಿಳೆಯರು ಶಿಬಿರದ ಸ್ಥಳಕ್ಕೆ ಓಡಿಬಂದೆವು. 'ದಯವಿಟ್ಟು ನಿಲ್ಲಿಸಿ, ನಮ್ಮ ಮಾತು ಕೇಳಿ' ಎಂದು ಟ್ರಕ್ಕುಗಳನ್ನು ಹಿಡಿದು ವಿನಂತಿಸಿದೆವು. ನಮ್ಮ ಮೇಲೆರಗಲು ಡೆಹರಾಡೂನಿನ ಕೊಳೆಗೇರಿಯ ಮಹಿಳೆಯರನ್ನು ಕರೆತಂದಿದ್ದರು. ಅವರೆಲ್ಲಾ ನಮ್ಮನ್ನು ಪಕ್ಕಕ್ಕೆ ತಳ್ಳಿ ದಾರಿಮಾಡಿಕೊಂಡು ಟ್ರಕ್ಕುಗಳಲ್ಲಿ ಹೊರಟುಹೋದರು. ಎಂಟು ಮಂದಿ ಗೂಂಡಾಗಳು ನಮ್ಮೊಂದಿಗೆ ಉಳಿದರು. ಅವರೆಂದರು: "ಕೇಳಿ ತಾಯಂದಿರೆ, ಅಕ್ಕತಂಗಿಯರೆ ಕೇಳಿ ನೀವು ಆರು ತಿಂಗಳಿಂದ ಚಿಪ್ಕೊ ಚಳುವಳಿಗಾರರೊಂದಿಗೆ ಕೆಲಸ ಮಾಡುತ್ತಿರುವಿರಿ. ಈ ಆರು ತಿಂಗಳಲ್ಲಿ ಅವರು ನಿಮಗೆ ಯಾವ್ಯಾವ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ ?" ನಾನು ಹೇಳಿದೆ: "ಕೇಳಿ ಸೋದರರೇ, ಗುಜ್ರಾಲ 26 ವರ್ಷಗಳಿಂದ ನಮ್ಮ ಬೆಟ್ಟವನ್ನು ಅಗೆಯುತ್ತಿದ್ದಾನೆ. ನಮಗೆ ಅವನೇನು ಮಾಡಿದ್ದಾನೆ ? ಚಿಪ್ಕೊ ಜನರು ನಮ್ಮೊಂದಿಗೆ ಕೇವಲ ಆರು ತಿಂಗಳಿಂದ ಇದ್ದಾರೆ. ಇನ್ನು 26 ವರ್ಷಗಳ ಅನಂತರ ಬಂದು ನೋಡಿ, ಅವರು ನಮಗೇನನ್ನು ಮಾಡಲು ಸಹಾಯ ಮಾಡಿದ್ದಾರೆಂದು" "ನಿಮಗೇನು ಬೇಕೋ ಕೇಳಿ–ನಾವು ಕೊಡುತ್ತೇವೆ"— ಗುಜ್ರಾಲನ ಜನರೆಂದರು. ನಮ್ಮ ಅಗತ್ಯವೆಂದರೆ ಒಂದೇ ನಮ್ಮ ಬೇಡಿಕೆಯೂ ಒಂದೇ. ಅದೇನೆಂದರೆ ಗಣಿಯನ್ನು ಮುಚ್ಚುವುದು'—ನಾವೆಂದೆವು. ಗಣಿಕಾಮಗಾರಿಯನ್ನು ನಿಲ್ಲಿಸುತ್ತಾರೆ; ಈಗ ಅಗೆದಷ್ಟನ್ನು ಮಾತ್ರ ತೆಗೆದುಕೊಂಡು ಹೋಗುತ್ತಾರೆ ಅವರೆಂದರು. ಇಲ್ಲ ಆ ಕಲ್ಲುಗಳು ನಮ್ಮ ಬೆಟ್ಟಕ್ಕೆ ಸೇರಿದ್ದು ಅವುಗಳನ್ನು ಮತ್ತೆ ವಾಪಸ್ಸು ಜೋಡಿಸುತ್ತೇವೆ. ಅವುಗಳಿಂದ ತಡೆ-ಅಣೆಕಟ್ಟುಗಳನ್ನು ಮಾಡುತ್ತೇವೆ. ಆ ಕಲ್ಲುಗಳಿಂದ ನಮ್ಮ ಕಾಡು - ಬೆಟ್ಟಗಳನ್ನು ರಕ್ಷಿಸುತ್ತೇವೆ. ಆ ಕಲ್ಲುಗಳು ನಮ್ಮ ಭೂಮಿ ತಾಯಿಯ ಮಾಂಸಖಂಡಗಳಂತೆ. ಅವುಗಳನ್ನು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿಸುತ್ತೇವೆ. ಅವಳ ಗಾಯಗಳನ್ನು ವಾಸಿ ಮಾಡುತ್ತೇವೆ. ನಾವಂದೆವು. ನಮ್ಮ ಒಂದೊಂದು ಟ್ರಿಪ್ಪಿಗೂ ಒಂದು ಟ್ರಕ್ಕು ಸುಣ್ಣದ ಕಲ್ಲುಗಳಿಂದ ಬಂದ ಗಳಿಕೆಯನ್ನು ಕೊಡುತ್ತೇವೆ ಎಂದು ಅವರು ಹೇಳಿದರು. ಆದರೆ ನಾವು ಗಣಿಕಾಮಗಾರಿಯನ್ನು ನಿಲ್ಲಿಸುವಂತೆ ಮತ್ತೆ ಮತ್ತೆ ಒತ್ತಾಯಿಸಿದೆವು. ನಮ್ಮನ್ನು ಯಾವ ಆಮಿಷಗಳೂ ಸೆಳೆಯಲಾರವು ಎಂದು ತಿಳಿಸಿದೆವು. ನಿಮ್ಮ ಸಂಚಾರಕ್ಕೆ ಟ್ರಕ್ಕೊಂದನ್ನು ಕೊಡುತ್ತೇವೆ ಆದರೆ ಬಹುಗುಣ ಅದನ್ನು ನಿಮಗೆ ಕೊಡಲಾರ! ಎಂದರು. ನಾವೇ ನಮ್ಮ ಸಾರಿಗೆ, ನಮ್ಮ ಕಾಲುಗಳೇ ನಾವು ಹೆಚ್ಚು ಅವಲಂಬಿಸಬಹುದಾದ ಸಾರಿಗೆ ಸೌಕರ್ಯ ನಮಗೆ ನಿಮ್ಮ ಟ್ರಕ್ಕುಗಳ ಅಗತ್ಯವಿಲ್ಲ. ಈ ಗಣಿ ಕೆಲಸ ನಿಲ್ಲಬೇಕೆಂಬುದೇ ನಮ್ಮ ಆಶಯ ಎಂದೆವು.

ವಂದನಾ

ಅವರು ನಿಮ್ಮ ಮೇಲೆ ಧಾಳಿ ನಡೆಸಿರುವುದು ಇದು ಮೂರನೇ ಬಾರಿ. ನವೆಂಬರ್ ಘಟನೆಯಲ್ಲಿ ಏನು ನಡೆಯಿತು ?

ಚಾಮುಂಡೇಯಿ

ನಾನು ನನ್ನ ಮಕ್ಕಳಿಗೆ ಊಟ ಕೊಟ್ಟಿದ್ದೆ. ನನ್ನ ಮಕ್ಕಳಾದ ಸೂರಜ್‌ಸಿಂಗ್ ಮತ್ತು ಭರತ್‌ಸಿಂಗ್‌ರೊಡನೆ ಕಾಡಿಗೆ ಹೋಗುತ್ತಿದ್ದಾಗ ಟ್ರಕ್ಕೊಂದು ಬರುತ್ತಿದ್ದುದನ್ನು ಕಂಡೆ. ಶಿಬಿರದಲ್ಲಿರುವವರಿಗೆ

ವಿಷಯವನ್ನು ತಿಳಿಸುವಂತೆ ನನ್ನ ಮಗ ಸೂರಜ್‌ಸಿಂಗ್ ನನ್ನು ಕಳುಹಿಸಿದೆ. ಆದರೆ ಅಲ್ಲಿರುವವರೆಲ್ಲ ಇವರ ಧಾಳಿಗೊಳಗಾಗಿದ್ದರು : ಅವರನ್ನು ರಸ್ತೆಯ ಪಕ್ಕಕ್ಕೆ ತಳ್ಳಿದ್ದರು. ನಾನು ಟ್ರಕ್ಕುಗಳನ್ನು ಗಣಿಪ್ರದೇಶಕ್ಕೆ ಅರ್ಧದಾರಿಯಲ್ಲಿ ಕಂಡು ಅವುಗಳಿಗೆದುರಾಗಿ ನಿಂತೆ. ನನ್ನ ಹೆಣದ ಮೇಲೆ ಈ ಟ್ರಕ್ಕುಗಳು ಹೋಗಬಹುದು ಎಂದೆ. ಅವರು ಕೊನೆಗೆ ಟ್ರಕ್ಕುಗಳನ್ನು ಹಿಂದಕ್ಕೆ ತಿರುಗಿಸಿದರು.

ವಂದನ

ಬದುಕಿನಲ್ಲಿ ನೀವು ರಕ್ಷಿಸಬಯಸುವ ಮೂರು ಮುಖ್ಯ ವಾದವು ಯಾವುವು ?

ಚಾಮುಂಡೇಯಿ

ನಮ್ಮ ಸ್ವಾತಂತ್ರ್ಯ, ಅರಣ್ಯಗಳು ಮತ್ತು ಆಹಾರ ಇವುಗಳಿಲ್ಲದೆ ನಾವಿಲ್ಲ. ನಾವು ಬಡವರಾಗುತ್ತೇವೆ. ನಮ್ಮ ಆಹಾರ ಉತ್ಪಾದನೆಯಿಂದ ನಾವು ಶ್ರೀಮಂತ ರಾಗುತ್ತೇವೆ. ನಮಗೆ ವ್ಯಾಪಾರಿಗಳಿಂದ ಹಾಗೂ ಸರ್ಕಾರಗಳಿಂದ ಉದ್ಯೋಗ ಬೇಕಿಲ್ಲ. ನಮ್ಮ ಜೀವನೋಪಾಯ ನಾವು ಮಾಡಿಕೊಳ್ಳುತ್ತೇವೆ. ವಾಣಿಜ್ಯ ಬೆಳೆಗಳಾದ ರಜ್ಮಾ (rajma) ಮತ್ತು ಶುಂಠಿಯನ್ನು ಬೆಳೆಯುತ್ತೇವೆ. ಎರಡು ಕ್ವಿಂಟಾಲ್‌ಗಳಷ್ಟು ಶುಂಠಿ ನಮ್ಮೆಲ್ಲ ಅಗತ್ಯಗಳನ್ನೂ ಪೂರೈಸುತ್ತವೆ. ಗೊಬ್ಬರ ಮತ್ತು ಆಹಾರ ಮೂಲವಾದ ಕಾಡುಗಳೇ ಮುಖ್ಯ ವಾದವು. ಕಾಡುಗಳಲ್ಲಿ ದುಡಿಯುವ, ಜಮೀನಿನಲ್ಲಿ ಉಳುವ ಸ್ವಾತಂತ್ರ್ಯ ನಮಗೆ ಬಹಳ ಮುಖ್ಯ. ಗುಜ್ರಾಲನ ಗಣಿಕೆಲಸ ನಮ್ಮ ಉದ್ಯೋಗವನ್ನು, ಸಂಪತ್ತನ್ನು ನಾಶಮಾಡುತ್ತಿದೆ. ಆದರೆ ಅವರು ಗಣಿಯ ಮೂಲಕ ಉದ್ಯೋಗ ಮತ್ತು ಸಂಪತ್ತನ್ನು ಸೃಷ್ಟಿಸುವ ಬಗ್ಗೆ ಮಾತಾಡುತ್ತಾರೆ.

ವಂದನಾ

ಅವರು ತೋರಿಸುವ ಆಮಿಷಗಳು ನಿಮ್ಮನ್ನು ಚಂಚಲ ಗೊಳಿಸುತ್ತವೆಯೆ ?

ಇತವಾರಿ

ನನ್ನನ್ನು ಚಳುವಳಿಯಿಂದ ಹಿಂಜರಿಯುವಂತೆ ಮಾಡಿದರೆ ಐದು ಲಕ್ಷ ರೂ.ಗಳನ್ನು ಕೊಡುವ ಆಮಿಷ ವನ್ನು ಗುಜ್ರಾಲ ನನ್ನ ಮಗನಿಗೆ ತೋರಿಸಿದ. ಹಣ ವನ್ನು ಎಲ್ಲಿಂದ ಬೇಕಾದರೂ ಪಡೆಯಬಲ್ಲೆ. ಆದರೆ ನನ್ನ ತಾಯಿಯ ಗೌರವ-ಘನತೆಗಳು ಗ್ರಾಮದ ಜನರಿಂದ ಮಾತ್ರ ದೊರಕುತ್ತದೆ. ಅದನ್ನು ನಾವು ತ್ಯಾಗ ಮಾಡ ಲಾರೆವು' ಎಂದು ನನ್ನ ಮಗ ಹೇಳಿದ.

ಚಾಮುಂಡೇಯಿ

ನನ್ನನ್ನು ಚಳುವಳಿಯಿಂದ ಹಿಂದೆ ಸರಿಯುವಂತೆ ತಿಳಿಸಲು ನನ್ನ ಸೋದರನಿಗೆ ಹೇಳಿದರು. ನಮಗಾಗಿ ಒಂದು ಶಾಲೆ ಮತ್ತು ಆಸ್ಪತ್ರೆ ಕಟ್ಟಿಸುವುದಾಗಿ ಸ್ವತಃ ಗುಜ್ರಾಲನೇ ಬಂದು ಹೇಳಿದ. ಇದನ್ನೆಲ್ಲಾ ಯೋಚಿಸಲು ಇಪ್ಪತ್ತಾರು ವರ್ಷಗಳು ಬೇಕಿತ್ತೆ, ಎಂದು ಪ್ರಶ್ನಿಸಿದೆವು. ಈಗ ಬಹಳ ತಡವಾಗಿದೆ. ಅವನ ಗಣಿಯನ್ನು ಮುಚ್ಚಿಸಿ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ನಮಗೆ ಅನಿವಾರ್ಯ ಎಂದು ತಿಳಿಸಿದೆವು.

ವಂದನಾ

ನಿಮ್ಮ ಶಕ್ತಿಯ ಮೂಲ ಏನು ? ಚಿಪ್ಕೋದ ಶಕ್ತಿ ಯಾವುದು ?

ಇತವಾರಿ

ಕಾಡುಗಳಿಂದ, ಹುಲ್ಲುಗಾವಲುಗಳಿಂದ ನಾವು ಶಕ್ತಿ ಯನ್ನು ಪಡೆಯುತ್ತೇವೆ. ಅವುಗಳು ತಮ್ಮ ಆಂತರಿಕ ಶಕ್ತಿಯ ಮೂಲಕ ವರ್ಷದಿಂದ ವರ್ಷಕ್ಕೆ ಬೆಳೆಯುವು ದನ್ನು ಗಮನಿಸುತ್ತೇವೆ. ಆ ಮೂಲಕ ನಮ್ಮ ಶಕ್ತಿ ಯನ್ನು ಪಡೆಯುತ್ತೇವೆ. ನಮ್ಮ ನದಿಗಳು ತಮ್ಮನ್ನು ತಾವು ನವೀಕರಿಸಿಕೊಳ್ಳುವುದನ್ನು ನೋಡುತ್ತೇವೆ. ಅವು ಗಳ ಸ್ವಚ್ಛವಾದ, ಥಳಗುಟ್ಟುವ ನೀರನ್ನು ಕುಡಿಯು ತ್ತೇವೆ. ನಮ್ಮ ಶಕ್ತಿಯನ್ನು ಪಡೆದುಕೊಳ್ಳುತ್ತೇವೆ. ಹಸನಾದ ಮೇಕೆ ಹಾಲು ಕುಡಿಯುತ್ತೇವೆ; ತುಪ್ಪ ತಿನ್ನುತ್ತೇವೆ; ನಮ್ಮದೇ ಭೂಮಿಯ ಆಹಾರವನ್ನು ಸೇವಿಸುತ್ತೇವೆ ಇವೆಲ್ಲವೂ ನಮ್ಮ ದೇಹಕ್ಕೆ ಪೋಷಣೆ ಮಾತ್ರ ನೀಡುವುದಿಲ್ಲ; ನೈತಿಕ ಶಕ್ತಿಯನ್ನೂ ನೀಡುತ್ತವೆ ನಾವೇ ನಮ್ಮ ಯಜಮಾನರು; ನಮ್ಮ ಸಂಪತ್ತನ್ನು ನಾವೇ ನಿಯಂತ್ರಿಸುತ್ತೇವೆ, ಉತ್ಪಾದಿಸುತ್ತೇವೆ. ಅದರಿಂದಲೇ 'ಪುರಾತನ'ದ 'ಹಿಂದುಳಿದ' ಮಹಿಳೆಯರು

ತಮಗೆ ಬೇಕಾದ ವಸ್ತುಗಳನ್ನು ಪೇಟೆಯಿಂದ ಕೊಳ್ಳು ವುದಿಲ್ಲ; ತಾವೇ ಉತ್ಪಾದಿಸುತ್ತಾರೆ. ಇವರೇ ಚಿಪ್ಕೋದ ನಾಯಕರು. ಪ್ರಕೃತಿಯ ಶಕ್ತಿಯೇ ನಮ್ಮ ಶಕ್ತಿ. ಗುಜ್ರಾಲನ ವಿರುದ್ಧದ ಈ ನಮ್ಮ ಶಕ್ತಿ ಈ ಆಂತರಿಕ ಮೂಲಗಳಿಂದ ಬಂದುದಾಗಿದೆ. ತನ್ನ ಹಣದ ಮಿಥ್ಯಾ ಶಕ್ತಿಯಿಂದ ನಮ್ಮನ್ನು ತುಳಿಯುವ, ಬೆದರಿಸುವ ಗುಜ್ರಾಲನ ಪ್ರಯತ್ನಗಳಿಂದಾಗಿ ಈ ಶಕ್ತಿ ಬಲಗೊಂಡಿದೆ. ಅವನ ಗಣಿಕೆಲಸವನ್ನು ಮುಚ್ಚಿಸುವ, ಗುಜ್ರಾಲನು ಪ್ರತಿನಿಧಿಸುವ ಶಕ್ತಿಗೆ ಸವಾಲೆಸೆಯುವ, ವಿರೋಧಿಸುವ ಕೆಲಸಕ್ಕಾಗಿ, ಶಾಂತಿಯುತ ಪ್ರತಿಭಟನೆ ಗಾಗಿ ನಮ್ಮ ಪ್ರಾಣವನ್ನೇ ಪಣವಾಗಿಟ್ಟು ನಮ್ಮನ್ನು ನಾವೇ ಅರ್ಪಿಸಿಕೊಂಡಿದ್ದೇವೆ. ನಮ್ಮನ್ನು ಅತಿಕ್ರಮಿಸುವ ಅವನ ಪ್ರತಿಯೊಂದು ಪ್ರಯತ್ನವೂ ನಮ್ಮ ಒಗ್ಗಟ್ಟನ್ನು ಬಲಗೊಳಿಸಿದೆ. ಮಾರ್ಚ 20ರಂದು ಗಣಿಯಿಂದ ಹಿಂದಿರುಗುತ್ತಿದ್ದಾಗ ನಮ್ಮ ಮೇಲೆ ಕಲ್ಲು ತೂರಿದರು; ನಮ್ಮ ಮಕ್ಕಳ ಮೇಲೆ ಕಲ್ಲು ತೂರಿದರು; ಕಬ್ಬಿಣದ ಸರಳುಗಳಿಂದ ಹೊಡೆದರು. ಆದರೆ ನಮ್ಮ ಶಕ್ತಿಯನ್ನು ನಾಶಮಾಡಲು ಅವರಿಂದಾಗಲಿಲ್ಲ.

—ವಂದನಾಶಿವ

ಇಂಗ್ಲಿಷಿನಿಂದ ಕನ್ನಡಕ್ಕೆ : **ವೆಂ. ವನಜ**
ಮೈಸೂರು

'ವರದಕ್ಷಿಣೆ' ಬಗ್ಗೆಗಿನ ಮಧುಕೇಶ್ವರ ಲೇಖನ ಒಮ್ಮೆ ಹೆಚ್ಚು ವಿವಾದಕ್ಕೊಳಗಾಗಿದ್ದು ಹಲವಾರು ಟೀಕೆ–ಪ್ರಶಂಶೆಗಳಿಗೆ ಒಳಗಾಗಿತ್ತು. 'ಹೆಣ್ಣುಮಕ್ಕಳಿಗೆ ಆಸ್ತಿ' ಈ ವಿಚಾರ ದಲ್ಲಿ ಈಗ ನಡೆಯುತ್ತಿರುವ ಚರ್ಚೆಗೆ ಈ ಲೇಖನ ಗಣನೀಯವಾಗಿ ಕೊಡುಗೆ ನೀಡುವು ದರಿಂದ ಇಂಗ್ಲೀಷ ಲೇಖನದ ಅನುವಾದ ಈ ಸಂಚಿಕೆಯಲ್ಲಿ ನೀಡಿದ್ದೇವೆ. ನಿಮ್ಮ ಅನಿಸಿಕೆಗಳಿಗೆ ಸ್ವಾಗತವಿದೆ.

—ಸಂ.ಮಂ.

ಮಹಿಳಾ ಚಳುವಳಿಯ ಲಯ

"ಇಶ್ಯೂಸ್ ಎಟ್ ಸ್ಟೇಕ್" ನಂದಿತಾ ಗಾಂಧಿ ಹಾಗೂ ನಂದಿತಾ ಶಾ ಅವರು ಪ್ರಕಟಿಸಿದ ಒಂದು ಮಹತ್ವದ ಕೃತಿ. ಮಹಿಳಾ ಚಳುವಳಿಯ ಸಿದ್ಧಾಂತ ಹಾಗೂ ಆಚರಣೆಗಳನ್ನು ವಸ್ತುನಿಷ್ಠೆಗಾಗಿ ಹಿಡಿದಿಡುವ ಐತಿಹಾಸಿಕ ದಾಖಲೆ. ಈ ಪುಸ್ತಕದ ಭಾವಾನುವಾದವನ್ನು ಮಾನಸದಲ್ಲಿ ಕಂತುಗಳಲ್ಲಿ ಪ್ರಕಟಿಸುತ್ತೇವೆ.

ಸಂ. ಮ.

ಮಹಿಳಾ ಚಳುವಳಿಗೆ ಆದಿಯಾಗಲಿ, ಅಂತ್ಯವಾಗಲಿ ಇಲ್ಲ. ಅದೊಂದು ಭಾವನೆಯಾಗಿ ನಮ್ಮೆದೆಯ ಆಳದಲ್ಲಿ ಸಿಟ್ಟಾಗಿ, ಜೀವಂತವಾಗಿದೆ. ಜೀವನದೊಳಗೆ, ಹೊರಗೆ, ನಮ್ಮ ಪ್ರಜ್ಞೆ ಹಾಗೂ ಕ್ರಿಯೆಗಳೊಳಗೆ ಅದು ಸಂಗೀತದಂತೆ ಹರಿದಿದೆ. ನಮ್ಮ ಪುರಾಣ ಕತೆಗಳಲ್ಲಿ, ಜಾನಪದ ಕತೆಗಳಲ್ಲಿ, ಹಾಡುಗಳಲ್ಲಿ, ಹಾಸ್ಯಗಳಲ್ಲಿ ಎಲ್ಲೆಲ್ಲಿ ಹೇಗೆ ಸಾಧ್ಯವಾಗಿದೆಯೋ ಹಾಗೆ ಸ್ತ್ರೀಯರು ತಮ್ಮ ಮೇಲಿನ ಶೋಷಣೆಯನ್ನು ಪ್ರತಿಭಟಿಸಿದ್ದಾರೆ. ಧೈರ್ಯ ಮತ್ತು ಬುದ್ಧಿಮತ್ತೆಗಳಿಂದ ಸಾಮಾಜಿಕ ಸಂಪ್ರದಾಯಗಳನ್ನು ಸನ್ಯಾಸಿನಿಯರಾಗುವುದರ, ಧಾರ್ಮಿಕ ಆಚರಣೆಯ ಮೂಲಕ ಸ್ತ್ರೀಯರು ಪ್ರತಿಭಟನೆಯ ಹಾದಿಯನ್ನು ತುಳಿದಿದ್ದಾರೆ. ಕಾಲಾನುಕಾಲದಲ್ಲಿ ಈ ಪ್ರತಿಭಟಣೆಯು ಜಾನಪದ ನೆಲೆಯಿಂದ ಅಪ್ರಜ್ಞಾಪೂರ್ವಕವಾಗಿ ಪ್ರತ್ಯೇಕವಾದ ಕ್ರಿಯೆಗಳಿಂದ ಒಂದು ನಿರ್ಧಿಷ್ಟ ಸಾಮೂಹಿಕ ಹಂತಕ್ಕೆ ತಲುಪಿತು. ಒಂದು ನಿರ್ಧಿಷ್ಟ ಆಲೋಚನಾ ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಇಂದು ಇದು ಘಟನೆಗಳಾಗಿ, ಚಾರಿತ್ರಿಕಘಟ್ಟಗಳಾಗಿ ಒಂದು ಚಳುವಳಿಯ ರೂಪದಲ್ಲಿ ಕಂಡುಬರುತ್ತದೆ.

ಚಳುವಳಿಯನ್ನು ಶಬ್ದಗಳಲ್ಲಿ, ವಿವರಣೆಯಲ್ಲಿ, ವಿಶ್ಲೇಷಣೆಯಲ್ಲಿ ವಿವರಿಸುವುದು ತುಂಬಾ ಕಷ್ಟ. ಸಂಗೀತದಂತೆ ಇದನ್ನು ಒಂದು ತಾತ್ವಿಕ ಪರಿಕಲ್ಪನೆಯ ವಿಧಾನದಲ್ಲಾಗಲಿ ಪೂರ್ಣತೆಯನ್ನು ಒಡೆಯುವ ಕೃತಕ ವಿಭಾಗಗಳಿಂದಾಗಲೀ ಇದನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ.. ಸಂಗೀತ ಆಳವಾಗಿ ವೈಯಕ್ತಿಕ ಹಂತದಲ್ಲಿ ತಟ್ಟುವಂತೆ ಇದನ್ನು ಮೊದಲು ಅನುಭವಿಸಬೇಕು. ನಂತರ ಅರ್ಥಮಾಡಿಕೊಳ್ಳಬೇಕು. ಮಹಿಳಾ ಶೋಷಣೆಯೆನ್ನುವುದು ಮತ್ತೊಬ್ಬರ ಮೇಲಾಗುವುದಲ್ಲ. ನಾವೆಲ್ಲರೂ ಅದರ ಭಾಗವಾಗಿದ್ದೇವೆ. ಇದನ್ನು ನಾವು ಗುರುತಿಸಿಕೊಳ್ಳದಿದ್ದರೆ ನಮ್ಮ ಜೀವನ ಹಾಗೂ ಹೋರಾಟಗಳಲ್ಲಿ ನೀರವತೆ ಹಾಗೂ ಯಾಂತ್ರಿಕತೆಯಿಂದ ಕೊರಗಬೇಕಾಗುತ್ತದೆ. ಚಳುವಳಿಯ ಸಂಕೀರ್ಣತೆ ಹಾಗೂ ಅದರಲ್ಲಿ ಅಡಗಿರುವ ಮಿತಿಯ ಅರಿವು ನಮಗಿದೆ. ಆದುದರಿಂದಲೇ ಹಲವಾರು ದೃಷ್ಟಿಕೋನಗಳ ಸಮ್ಮಿಶ್ರಣದಿಂದ ಚಳುವಳಿಯ ಪ್ರಾಸವನ್ನು ಹಿಡಿಯುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ನಾವು ಮಾಡುತ್ತಿದ್ದೇವೆ.

ನಾವು ಇಂದು ಕರೆಯುವ ಭಾರತೀಯ ಮಹಿಳಾ ಚಳುವಳಿಯು 1800ರಲ್ಲಿ ಪ್ರಾರಂಭವಾದ ಸಮಾಜ ಸುಧಾರಣಾ ಚಳುವಳಿಯ ಒಂದು ಭಾಗವಾಗಿ ಮೂಡಿ ಬಂದಿತು. ವಿಧವೆಯರನ್ನು ಎಷ್ಟು ಅಮಾನುಷವಾಗಿ ನೋಡಿಕೊಳ್ಳಲಾಗುತ್ತಿತ್ತೆಂದರೆ ಅವರಿಗೆ ಸತಿ ಹೋಗುವುದು ಅಥವಾ ವೇಶ್ಯೆಯರಾಗುವುದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಇಂತಹ ಅಮಾನುಷ ಪದ್ಧತಿಯನ್ನು ಪ್ರತಿಭಟಿಸಿದ ಪುರುಷರು ಹಾಗೂ ಮಹಿಳೆಯರು ಸಮಾಜದ ನಿಂದನೆಗೆ ಬಹಿಷ್ಕಾರಕ್ಕೆ ತುತ್ತಾಗಬೇಕಾಯಿತು. ಸುಧೀರ್ಘ ಹೋರಾಟದ ಫಲವಾಗಿ 1829ರಲ್ಲಿ ಸತಿಪದ್ಧತಿಯನ್ನು ರದ್ದು ಮಾಡುವ ಕಾನೂನು ಜಾರಿಗೆ ಬಂದಿತು. ಸಂಪ್ರದಾಯವಾದ ಅಥವಾ ಆಧುನಿಕವಾದ ವಿದ್ಯಾಭ್ಯಾಸವಾಗಲೀ ಯಾವುದೇ ವರ್ಗದ ಮಹಿಳೆಯರಿಗೆ ಲಭ್ಯವಿರಲಿಲ್ಲ. ಮಧ್ಯಮ ವರ್ಗದ ಪುರುಷರು ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದ ಹಾಗೆ ಮಹಿಳೆಯರು ಸಂಪ್ರದಾಯದ ರೀತಿ-ನೀತಿ, ಪರದಾಪದ್ಧತಿ, ಮನೆ ಕೆಲಸದ ಹೊರೆಗಳಿಗೆ ಸೀಮಿತಗೊಂಡರು. ಹಿಂದೂ

ಸಮಾಜ ಸುಧಾರಕರಾದ ಆರ್ಯಸಮಾಜ ಹಾಗೂ ಬ್ರಹ್ಮಸಮಾಜ ಪ್ರಪ್ರಥಮವಾಗಿ ಸಂಘಟಿಸಿದ ಮಹಿಳಾ ಮಂಡಳಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ನೀಡಿತು.

ಪುರುಷರಿಂದ ಪ್ರಾರಂಭಗೊಂಡ ಈ ಮಹಿಳಾ ಚಟುವಟಿಕೆಗಳ ಬಗ್ಗೆ ಹಲವಾರು ರೀತಿಯ ಜಿಜ್ಞಾಸಾ ಪೂರ್ಣವಾದ ವಿವರಣೆಗಳು ಇವೆ. ಸ್ತ್ರೀಯರನ್ನು ಮೇಲೆತ್ತಬೇಕೆಂಬ ಈ ಕ್ರಿಯೆಗಳು "ಸ್ತ್ರೀಯರಲ್ಲಿ ತಿಳುವಳಿಕೆಯನ್ನು ಮೂಡಿಸುವ ಮೂಲಕ ಕುಟುಂಬವನ್ನು ಬಲಗೊಳಿಸಬೇಕೆಂಬ ಉದ್ದೇಶದಿಂದ ಅಥವಾ ಕೇವಲ ಸ್ತ್ರೀಯರ ಮೇಲಾಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸುವ ಮಾನವೀಯ ಉದ್ದೇಶದಿಂದ ಕೂಡಿವೆಯೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ಇಂತಹ ವಿಶ್ಲೇಷಣೆಯನ್ನು ಮಾಡುವಾಗ ಎರಡು ಮುಖ್ಯ ಅಂಶಗಳನ್ನು ನಾವು ಗಮನಿಸಬೇಕು. ಸ್ತ್ರೀಯರ ತುಳಿತ, ಅನಕ್ಷರತೆ, ಅಜ್ಞಾನಕ್ಕೆ ಅವಳ ದುರ್ದೈವ ಎಂಬ ನಂಬಿಕೆ ಬದಲಾಗಿ ಸಮಾಜವೇ ಅವಳ ಈ ಸ್ಥಿತಿಗೆ ಕಾರಣವಾಗಿದೆ ಎಂಬ ನಂಬಿಕೆಯನ್ನು ಇದು ಪ್ರಥಮವಾಗಿ ಮೂಡಿಸಿತು. ಜೊತೆಗೆ ಸಮಾಜ ಸುಧಾರಕರು ಚಳುವಳಿಯ ಪರಿಣಾಮವಾಗಿ ಸ್ತ್ರೀಯರೇ ಹಲವಾರು ವೃತ್ತಿಗಳನ್ನು ಪ್ರವೇಶಿಸಿದ್ದು ಮಾತ್ರವಲ್ಲದೆ, ಮಹಿಳಾ ಸಂಘಟನೆ ಹೋರಾಟವನ್ನು ಪುರುಷರಿಂದ ತಾವು ಪಡೆದರು. 1890ರ ಸಮಯದಲ್ಲಿ ಭಾಷೆ, ಧರ್ಮ, ಸ್ತ್ರೀಯರ ಅಭಿವೃದ್ಧಿಯ ಆಧಾರದ ಮೇಲೆ ಭಾರತದಾದ್ಯಂತ ಪಟ್ಟಣಗಳಲ್ಲಿ ಮಹಿಳಾ ಸಂಘಟನೆಗಳು ಬೆಳೆಯಲಾರಂಭಿಸಿದವು. ಸುಬ್ಬಲಕ್ಷ್ಮಿ ಅಮ್ಮಾಳ ಅವರಿಂದ ಮದ್ರಾಸ್‌ನಲ್ಲಿ ಸ್ಥಾಪಿತವಾದ ಬ್ರಾಹ್ಮಣ ಮಹಿಳೆಯರ ಆಶ್ರಮ, ಮೈಸೂರಿನಲ್ಲಿ ಸೇವಾ ಸಮಾಜ, ಪೂನಾದಲ್ಲಿ ಭಗಿನೀ ಸಮಾಜ, ಬರೋಡಾದಲ್ಲಿ ಚಮನಾಬಾಯಿ ತಾಯಿ ಮಕ್ಕಳ ಕಲ್ಯಾಣ ಸಮಿತಿ, ಮುಂತಾದವುಗಳು ಪ್ರಾರಂಭವಾದವು.

1905ರಲ್ಲಿ ಬೆಳೆಯುತ್ತಿದ್ದ ಸ್ವದೇಶಿವಸ್ತು ಚಳುವಳಿಯ ಪರಿಣಾಮವಾಗಿ ನಾಯಕರು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲು ಮಹಿಳಾ ನಾಯಕಿಯರಿಗೆ ಕರೆ ನೀಡಿದರು. ಬಹುಮಂದಿ ಚಳುವಳಿಯ ಬಗ್ಗೆ ಆಸಕ್ತಿ ತೋರಿದರಾದರೂ, ಬೆಂಬಲ ನೀಡಿದವರು ಕೆಲವರು ಮಾತ್ರ. 1930ರ ಸಮಯದಲ್ಲಿ ಅಸಹಕಾರ ಚಳುವಳಿ ಹಾಗೂ ಮಹಿಳಾ ಚಳುವಳಿಗೂ ಒಂದು ಸಂಬಂಧವನ್ನು ಸ್ಥಾಪಿಸಿದರು. ಇದು ಮಹಿಳೆಯರು ಮತದಾನದಲ್ಲಿ ಭಾಗವಹಿಸುವ ಹಕ್ಕನ್ನು ಪಡೆಯುವ ಬಗ್ಗೆ ವಿಸ್ತೃತವಾದ ಚರ್ಚೆಗೆ ಇಂಬು ನೀಡಿತು. ಮತದಾನದ ಬಗ್ಗೆ ಎರಡು ಪ್ರಮುಖ ವಾದವನ್ನು ನಾವು ಗಮನಿಸಬಹುದು. ಮೊಸಲಾತಿಯ ಆಧಾರದ ಮೇಲೆ ಸ್ತ್ರೀಯರಿಗೆ ಮತದಾನದ ಹಕ್ಕನ್ನು ನೀಡಬೇಕೆಂದು ವಾದಿಸಿದರೆ ಇನ್ನೊಂದು ವಾದವು ಸಂವಿದಾನಾತ್ಮಕ ಸಮಾಜ ವಯಸ್ಕ ಮತದಾನದ ಹಕ್ಕನ್ನು ನೀಡಬೇಕೆಂದು ವಾದಿಸಿತು. ಈ ಎರಡು ಗುಂಪುಗಳು ಸಾಮಾಜಿಕ ಬದಲಾವಣೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಆಗಾಗ ಬೇರೆ ಬೇರೆಯಾಗಿ ಹಾಗೂ ಒಟ್ಟಿಗೆ ಧಾರ್ಮಿಕ ಪುನರುತ್ಥಾನದ ಸಂಕೇತಗಳನ್ನು ತಮ್ಮ ವಾದಗಳಲ್ಲಿ ಬಳಸಿಕೊಂಡು ಕೆಲಸ ಮಾಡುತ್ತಿದ್ದವು.

ಸಾಮಾಜಿಕವಾಗಿ ಹಾಗೂ ಕಾನೂನಿನಲ್ಲಿರುವ ಎಲ್ಲಾ ತೊಡಕುಗಳನ್ನು ನಿವಾರಿಸಿ ಸ್ತ್ರೀಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ಬೇಡಿಕೆಗಳು ಸ್ತ್ರೀಯರಿಗೆ ಪೂರಕ ವಾತಾವರಣವನ್ನು ಉಂಟುಮಾಡಿದವು. ವಿಭಿನ್ನ ಗುಂಪುಗಳನ್ನು ವಿವಿಧ ರಾಜಕೀಯ ವಿಚಾರಧಾರೆ ಹೊಸ ಮತ್ತು ಹಳೆಯ ಬೇಡಿಕೆಗಳನ್ನು ಒಳಗೊಂಡು ಸಮಾನತೆಯ ತಾತ್ವಿಕ ವಿಚಾರಧಾರೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಧ್ವನಿಸಿದ ಆಲ್ ಇಂಡಿಯಾ ವಿಮನ್ಸ್ ಕಾನ್‌ಫರೆನ್ಸ್ 1929ರಲ್ಲಿ ರಚನೆಯಾಯಿತು. ವಿದ್ಯಾಭ್ಯಾಸ, ವಿವಾಹದ ಕಾನೂನಿನಲ್ಲಿ ಬದಲಾವಣೆ ವಿವಾಹ ವಿಚ್ಛೇದನ, ಆರ್ಥಿಕ ಸಮಾನತೆ, ಗಂಡನ ಆದಾಯದಲ್ಲಿ ಸ್ತ್ರೀಯರಿಗೆ ಹಕ್ಕು, ವಿಧವಾ ಮಹಿಳೆಯರಿಗೆ ನಿವೃತ್ತಿ ವೇತನ, ಗರ್ಭಪಾತದ ಹಕ್ಕು ಮುಂತಾದ ಬೇಡಿಕೆಗಳನ್ನು ಮುಂದಿಡಲಾಯಿತು. 1955ರ ಸಂವಿಧಾನದಲ್ಲಿ ಇಂತಹ ಪ್ರಗತಿಪರ ಕಾನೂನುಗಳಿರುವುದರ ಬಗ್ಗೆ ಇಂದು ನಾವು ಹೆಮ್ಮೆ ಪಡಬಹುದು.

ಸ್ವತಂತ್ರಾ ನಂತರ ಮಹಿಳಾ ಚಟುವಟಿಕೆಗಳು, ಮಹಿಳಾ ಸಂಸ್ಥೆಗಳು, ಸಂಘಟನೆಗಳ ರಚನೆ ದಾರಿ ಮಾಡಿಕೊಟ್ಟಿತು. ಮಹಿಳಾ ಮಂಡಳ ಹಾಗೂ ಸುಧಾರಣಾ ಕಾರ್ಯಕ್ರಮಗಳಿಗೆ ಸರ್ಕಾರವು ಬೆಂಬಲ ನೀಡತೊಡಗಿತು. ಬಹಳಷ್ಟು ಮಹಿಳೆಯರು ಭ್ರಮನಿರಸನ

ಗೊಂಡು ಭಾರತೀಯ ಮಹಿಳಾ ಚಳುವಳಿಯಿಂದ ದೂರ ಸರಿಯತೊಡಗಿದರು.

ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನಹಕ್ಕು, ಬಹು ಪತ್ನಿತ್ವದ ನಿಷೇಧ, ಸರಳೀಕೃತ ವಿಚ್ಛೇದನ, ಮಕ್ಕಳ ಸ್ವಾಮ್ಯದ ಹಕ್ಕು ಮುಂತಾದ ಬೇಡಿಕೆಗಳನ್ನೊಳಗೊಂಡ ಹಿಂದೂ ಕೋಡ್ ಬಿಲ್ ಈ ಮೇಲಿನ ಬೇಡಿಕೆಗಳನ್ನು ಕೈಬಿಟ್ಟಿದ್ದು, ಭ್ರಮನಿರಸನಕ್ಕೆ ಬಹುಮುಖ್ಯ ಕಾರಣ ವಾಗಿತ್ತು. ಆಲ್ ಇಂಡಿಯಾ ವಿಮೆನ್ಸ್ ಕಾನ್‌ಫರೆನ್ಸ್‌ ನಲ್ಲಿದ್ದ ಸಂಘಟನೆಗಳು ಪ್ರತ್ಯೇಕಗೊಂಡು ಫೆಡರೇಶನ್ ಆಫ್ ಇಂಡಿಯನ್ ವಿಮೆನ್, ಸಮಾಜವಾದಿ ಮಹಿಳಾ ಸಭಾಗಳನ್ನು ಕ್ರಮೇಣ ರಚಿಸಿಕೊಂಡವು.

ದುಡಿಯುವ ವರ್ಗದ ಹಾಗೂ ಮಧ್ಯಮ ವರ್ಗದ ಮಹಿಳೆಯರು ಅಭಿವೃದ್ಧಿ ಚಟುವಟಿಕೆಗಳಲ್ಲಿ ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇಂತಹ ಹೋರಾಟಗಳಲ್ಲಿ ಮಹಿಳೆಯರು ಭಾಗ ವಹಿಸುವಿಕೆಯ ರೀತಿ ರಾಜಕೀಯ ಪಕ್ಷದ ಪುರುಷರಿಂದ ನಿರ್ದೇಶಿತವಾಗಿದ್ದರೂ ಕೂಡ, ಮಹಿಳೆಯರು ತಮ್ಮಲ್ಲಿರುವ ಹೋರಾಟದ ಮತ್ತು ಸಂಘಟಿತ ಶಕ್ತಿಯ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಯಿತು. ಇದರೊಂದಿಗೆ ಪಾಶ್ಚಿಮಾತ್ಯ ಚಳುವಳಿಯ ಪ್ರಭಾವ, ಯುನೈಟೆಡ್ ನೇಶನ್ ಪ್ರಾಯೋಜಿಸಿದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ, ಮಹಿಳೆಯರ ಸ್ಥಾನಮಾನದ ಬಗ್ಗೆ ಬಂದ ವರದಿ ಮುಂತಾದವುಗಳು ಸಹ ಈ ಅವಧಿಯಲ್ಲಿ ಕಂಡು ಬಂದವು. ಗಾಂಧೀಜಿ ಹಾಗೂ ಜಯಪ್ರಕಾಶ್ ನಾರಾಯಣರ ಪ್ರಭಾವ ದಿಂದಾಗಿ ಮಹಿಳೆಯರು ಕ್ರಿಯಾಶೀಲರಾಗಿ ಭಾಗ ವಹಿಸಲು ಹಾಗೂ ತಮ್ಮ ಜೀವನದಲ್ಲಿ ಮೂಲಭೂತ ವಾದ ಬದಲಾವಣೆಯನ್ನು ಮಾಡಿಕೊಳ್ಳುವ ಪ್ರಯತ್ನ ವನ್ನು ಮಹಿಳೆಯರು ಮಾಡಿದರು.

ಈ ಮಧ್ಯದಲ್ಲಿ ಇತರ ಹೋರಾಟಗಳೊಂದಿಗೆ ಮಹಿಳೆಯರಿಗೆ ವಿಶಿಷ್ಟವಾದ ಮಹಿಳಾ ಸಂಸ್ಥೆಗಳು ರಚಿತ ವಾದವು. 1975ರಲ್ಲಿ ಲಾಲ್ ನಿಶಾನ್ ಪಾರ್ಟಿ ಸಂಯುಕ್ತ ಮಹಿಳಾ ಕಾನ್‌ಫರೆನ್ಸ್‌ನ್ನು ಪೂನಾದಲ್ಲಿ ನಡೆಸಿತು. ಸಿ.ಪಿ.ಎಂ ಪಕ್ಷ, ಕೇರಳದಲ್ಲಿ ಸಮಾಜವಾದಿ ಪಕ್ಷ, ದೇವದಾಸಿ ಹಾಗೂ ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಕುರಿತು ಸಭೆಗಳನ್ನು ನಡೆಸಿದವು. ಸರ್ಕಾರ ಹಾಗೂ ಅರೆಸರ್ಕಾರಿ ಸಂಸ್ಥೆಗಳು ಮಹಿಳಾ ದಿನಾಚರಣೆಯನ್ನು ಆಚರಿಸಲು ಪ್ರಾರಂಭಿಸಿದವು.

ಮಹಾರಾಷ್ಟ್ರದಲ್ಲಿ ಕುಡಿತ, ಹೆಂಡತಿಯನ್ನು ಹೊಡೆಯುವುದರ ವಿರುದ್ಧ ಪ್ರತಿಭಟನೆಯನ್ನು ಮಾಡ ಲಾಯಿತು. ಹೈದರಾಬಾದ್‌ನಲ್ಲಿ ಪ್ರೋಗ್ರೆಸಿವ್ ಆರ್ಗ ನೈಜೇಶನ್ ಆಫ್ ವುಮೆನ್, ಲೈಂಗಿಕ ಹಿಂಸೆ, ಹಾಗೂ ವರದಕ್ಷಿಣೆಯ ವಿರುದ್ಧ ಚಳುವಳಿಯನ್ನು ಪ್ರಾರಂಭಿಸಿತು. 1980ರಲ್ಲಿ ಬಾಂಬೆಯ ಸ್ತ್ರೀಮುಕ್ತಿ ಸಂಘಟನೆಯು (ಲಾಲ್ ನಿಶಾನ್ ಪಕ್ಷ ಪೋಷಿತ) ಬಿತ್ತಿ ಚಿತ್ರ ಪ್ರದರ್ಶನ ಹಾಗೂ ಸಭೆಗಳನ್ನು ಏರ್ಪಡಿಸಿದವು. ಸಮಾಜವಾದಿ ಮಹಿಳಾ ಗುಂಪು ಸ್ತ್ರೀ ಸಮಸ್ಯೆಗಳ ಅಧ್ಯಯನ ಹಾಗೂ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಮಥುರಾ ಕೇಸ್‌ನಲ್ಲಿ ಬಿಡುಗಡೆಯಾದ ಇಬ್ಬರು ಪೋಲಿಸ್ ಅಧಿಕಾರಿಗಳ ವಿರುದ್ಧದ ಹೋರಾಟದ ಫಲವಾಗಿ ಫೋರಂ ಎಗನೆಸ್ಟ ರೇಪ್ ರೂಪಿತವಾಯಿತು. ಸ್ತ್ರೀಶಕ್ತಿ ಸಂಘಟನೆ ಹೈದರಾಬಾದ್‌ನಲ್ಲಿ, ಪೂನಾದಲ್ಲಿ ಪುರೋಗಾಮಿ ಸಂಘಟನೆ ದೆಹಲಿಯಲ್ಲಿ ಸ್ತ್ರೀ, ಸಂಘರ್ಷ, ಮಹಿಳಾ ದಕ್ಷತಾ, ಮದ್ರಾಸ್‌ನಲ್ಲಿ ಪೆಣ್ಣುರಮೈ ಐಯಕ್ಕಮ್ಮ, ಬೆಂಗಳೂರಿನಲ್ಲಿ ವಿಮೋಚನಾ ಮುಂತಾದ ಸ್ವಯಂ ಸೇವಾ ಸಂಸ್ಥೆಗಳು ಪ್ರಾರಂಭವಾದವು. ದ ಫೆಮಿನಿಸ್ಟ ನೆಟವರ್ಕ್, ಮಾನುಷಿಯೊಂದಿಗೆ ಹಲವಾರು ಮಹಿಳಾ ಪತ್ರಿಕೆಗಳು ಸಹ ಪ್ರಾರಂಭವಾದವು. ಭಾರತೀಯ ಮಹಿಳಾ ಚಳುವಳಿಯು ತನ್ನ ಗಮನ ವನ್ನು ಅತ್ಯಾಚಾರ, ಹೆಂಡತಿಯನ್ನು ಹೊಡೆಯುವುದು, ವಿಚ್ಛೇದನ, ಹೊಸ ಕಾನೂನುಗಳಿಗೆ ಬೇಡಿಕೆಯನ್ನು ಇಡು ವುದರ ಬದಲು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಯಶಸ್ವಿಯಾಗಿ ಜಾರಿಗೆ ತರುವುದು, ವಿದ್ಯಾಭ್ಯಾಸ ಪಠ್ಯಪುಸ್ತಕಗಳಲ್ಲಿ ಸ್ತ್ರೀಯರ ಚಿತ್ರಣ, ಸಮಾನ ಹಕ್ಕು, ಸಮಾನ ಅವಕಾಶ ಸಮಾನ ವೇತನ ಮುಂತಾದ ಸಮಸ್ಯೆ ಗಳನ್ನು ಕೇಂದ್ರೀಕರಿಸಿದವು.

ಭಾರತೀಯ ಮಹಿಳಾ ಚಳುವಳಿ ತನ್ನ ಮೊದಲ ಹಂತದಲ್ಲಿ ಮೂರು ಮುಖ್ಯ ಬದಲಾವಣೆಗಳನ್ನು ತಂದಿತು. ಸ್ತ್ರೀಯರ ಜೀವನ ದೈವ ನಿರ್ಣಾಯಕವಾದು ದೆಂಬುದನ್ನು ತಿರಸ್ಕರಿಸಿತು. ಗಂಡು ಹೆಣ್ಣಿನ ನಡುವೆ ಇರುವ ಅಸಮಾನತೆ, ದೈಹಿಕ ರಚನೆಯ ಪರಿಣಾಮ ದಿಂದ ಮೂಡಿದೆ ಎಂಬ ವಾದವನ್ನು ತಳ್ಳಿಹಾಕಿತು.

ಮಹಿಳೆ ಮತ್ತು ಪುರುಷರ ನಡುವಿರುವ ಶ್ರೇಣೀಕೃತ ಸಂಬಂಧ ಹಾಗೂ ವ್ಯವಸ್ಥೆಯ ವಿಶ್ಲೇಷಣೆಯ ಮೂಲಕ ಹೊಸ ಸಮಾಜದ ನಿರ್ಮಾಣಕ್ಕೆ ನಾಂದಿಯನ್ನು ಹಾಡಿತು.

1985ರಲ್ಲಿ ಮಹಿಳಾ ಚಳುವಳಿಯಲ್ಲಿನ ವಿಭಿನ್ನ ತಾತ್ವಿಕ ವಿಚಾರಧಾರೆಗಳು ಬೆಳಕಿಗೆ ಬಂದವು. ಜನಪ್ರಿಯ ವಾದ ಪೂನಾ ಕಾನ್‌ಫರೆನ್ಸ್, ಆಲ್ ಇಂಡಿಯಾ ಡೆಮಾಕ್ರಟಿಕ್ ವಿಮೆನ್ಸ್ ಅಸೋಶಿಯೇಶನ್, ಎಡ ಪಂತೀಯ ವಿಚಾರ ಧಾರೆಯ ಮೂಲಕ ಮಹಿಳೆಯರ ಪ್ರಶ್ನೆಯನ್ನು ಬಲಪಡಿಸಿದವು. ಬಂಡವಾಳಶಾಹಿ ವ್ಯವಸ್ಥೆಯಿಂದಾಗುವ ಆರ್ಥಿಕ ಅವಲಂಬನೆ, ಶೋಷಣೆ ಯಿಂದಾಗಿ ಮಹಿಳೆಯರು ಶೋಷಿತರಾಗಿದ್ದಾರೆ. ಉತ್ಪಾದನೆಯಲ್ಲಿ ಮಹಿಳೆಯರು ಭಾಗವಹಿಸುವುದು, ವರ್ಗ ಸಂಘರ್ಷದಲ್ಲಿ ಭಾಗವಹಿಸುವುದರ ಮೂಲಕ ಸಮಾಜವಾದಿ ಸಮಾಜ ಮಹಿಳೆಯರನು ಸ್ವತಂತ್ರ ಗೊಳಿಸುವುದು. ಶೋಷಣೆಯ ಹಾಗೂ ಖಾಸಗೀ ಆಸ್ತಿಯ ಮೂಲವನ್ನು ಗುರುತಿಸುವಲ್ಲಿ ಅವರು ಎಂಗೆಲ್ಸ್‌ನ ವಾದಕ್ಕೆ ಮೊರೆ ಹೋಗುತ್ತಾರೆ. ಸಮಾಜ ವಾದದಿಂದ ಪ್ರೇರಿತ ಮಹಿಳೆಯರು ಮಹಿಳೆಯರ ಶೋಷಿತ ಮೂಲವನ್ನು ಸಂಪ್ರದಾಯ, ಧಾರ್ಮಿಕ ಮೂಢ ನಂಬಿಕೆಗಳು, ಮನುಷ್ಯರು ಸರಳ ಜೀವನವನ್ನು ತಿರಸ್ಕರಿಸಿ ವೈಭವ ಪೂರಿತ ಜೀವನವನ್ನು ನಡೆಸುವುದ ರಲ್ಲಿ ಹುಡುಕುತ್ತಾರೆ. ಗಾಂಧೀಜಿಯವರಿಂದ ಪ್ರಭಾವಿತ ರಾದ ಈ ಮಹಿಳೆಯರು, ಆಂತರಿಕ ಶಕ್ತಿಯ ಹುಡುಕಾಟ ಹಾಗೂ ಬದಲಾವಣೆಗೆ ಹೆಚ್ಚು ಒತ್ತು ನೀಡುತ್ತಾರೆ.

ಮಹಿಳೆಯರ ವಾಸ್ತವಿಕ ಜೀವನ ಹಾಗೂ ಸ್ತ್ರೀಯರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಕುರಿತು ರಾಜಕೀಯ ಪ್ರಶ್ನೆಯನ್ನು ಹೊಸದಾಗಿ ರಚಿತವಾದ ಯುವ ವಿದ್ಯಾರ್ಥಿಗಳ ಗುಂಪುಗಳು ಕೇಳತೊಡಗಿದವು. ಪಿಪ್ರಿ, ಬಿಹಾರ, ಡೆಲ್ಲಿ, ಬಾಂಬೆ, ಹೈದರಬಾದ್ ಮುಂತಾದ ಕಡೆಗಳಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿದ್ದ ವಿವಿಧ ಸ್ವರೂಪದ ಅಸಮಾನತೆಯನ್ನು ಪ್ರಶ್ನಿಸ ಲಾಯಿತು. ಕುಟುಂಬದಲ್ಲಿ ಹಾಗೂ ಸಾಂಸ್ಕೃತಿಕ, ಆರ್ಥಿಕ ರಂಗದಲ್ಲಿ, ಗಂಡು-ಮತ್ತು ಹೆಣ್ಣಿನ ಸಂಬಂಧದ ನಡುವೆ ಈ ಗುಂಪುಗಳು ಬದಲಾವಣೆಯನ್ನು ಬಯಸಿದವು.

ಮೊದಲು ಅನಾಥ, ಹಾಗೂ ಅವಿವಾಹಿತ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿದವರು ತುಂಬಾ ಕಡಿಮೆ. ಸ್ವತಂತ್ರಾ ನಂತರ ಮಹಿಳಾ ಸಂಘ ಸಂಸ್ಥೆಗಳು, ಮಹಿಳಾ ಮಂಡಳಿಗಳ ಸಂಖ್ಯೆ ಬೆಳೆಯುತ್ತಾ ಬಂದಿತು. 1970ರಲ್ಲಿ ರೈತ ಹಾಗೂ ಕಾರ್ಮಿಕ ಮಹಿಳೆಯರು ಹೆಚ್ಚು ಕ್ರಿಯಾ ಶೀಲರಾಗಿ ಚಳುವಳಿಯಲ್ಲಿ ತೊಡಗಿಸಿಕೊಂಡರು.

1977ರಲ್ಲಿ ಹಿಂದೂ ಧರ್ಮದ ಪೂಜಾರಿಗಳ ವಿರುದ್ಧ ನಡೆದ ಚಳುವಳಿಯು ಹೆಚ್ಚಿನ ಸಂಖ್ಯೆಯಲ್ಲಿ ಹರಿಜನ ಪುರುಷರು ಹಾಗೂ ಮಹಿಳೆಯರನ್ನು ಆಕರ್ಷಿಸಿತು. 1980ರಲ್ಲಿ ನಗರದಲ್ಲಿ ಮಧ್ಯಮ ವರ್ಗದ ಸಣ್ಣಪುಟ್ಟ ಗುಂಪುಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿತವಾದವು. ಮಹಿಳಾ ಚಳುವಳಿಯ ನಾಯಕತ್ವ ಮಧ್ಯಮ ವರ್ಗದ ಮಹಿಳೆಯರಲ್ಲೇ ಉಳಿದಿರುವುದು ಕಂಡುಬರುತ್ತದೆ. ಇದು ಕೇವಲ ಮಹಿಳಾ ಚಳುವಳಿಗೆ ಮಾತ್ರವಲ್ಲದೆ, ಇತರ ಚಳುವಳಿ ಹಾಗೂ, ಎಡಪಂಥೀಯ ಪಕ್ಷಗಳಿಗೂ ಅನ್ವಯಿಸುತ್ತದೆ. ರಾಜಕೀಯ ದೃಷ್ಟಿಕೋನದ ಗೈರು ಹಾಜರಿ, ತಾತ್ವಿಕ ಪರಿಕಲ್ಪನೆಯ ಕೊರತೆ, ಮುಂತಾದವು ಗಳಿಗೆ ಸಂಬಂಧ ಪಟ್ಟಂತೆ, ಮಹಿಳಾ ಚಳುವಳಿ ಹಲವಾರು ರೀತಿಯ ಟೀಕೆ, ಪ್ರಶ್ನೆಗಳನ್ನು ಎದುರಿಸಿದೆ. ಸಾಮಾನ್ಯವಾಗಿ ಮಹಿಳಾ ಚಳುವಳಿ ರಾಜ್ಯದ ಪರಿ ಕಲ್ಪನೆಯ ಒಳಗೆ ಹಾಗೂ ಹೊರಗೆ ಹೋರಾಡುವುದರ ಮೂಲಕ ಸ್ವನಿರ್ಧಾರದಿಂದ ಕ್ರಿಯಾಶೀಲವಾಗಿ ತನ್ನನ್ನು ತೊಡಗಿಸಿಕೊಂಡು ಪುರಸ್ಕೃತವಾಗಿದೆ.

ತನಗಿರುವ ಶಕ್ತಿ ಹಾಗೂ ಸಂಪನ್ಮೂಲಗಳಿಂದಾಗಿ ಭಾರತೀಯ ಮಹಿಳಾ ಚಳುವಳಿ ಹಲವಾರು ಬೇಡಿಕೆ ಗಳನ್ನಿಟ್ಟು ಸರ್ಕಾರದ 'ಮೇಲೆ ಒತ್ತಡವನ್ನು ಹೇರಿದೆ. ಈ ಮಹಿಳಾ ಚಳುವಳಿ ಹೇರಿದ ಒತ್ತಡದಿಂದಾಗಿ ಸರ್ಕಾರ ಮಹಿಳಾ ಮತ್ತು ಕಲ್ಯಾಣ ಇಲಾಖೆ, ಜನಗಣತಿ ಯಲ್ಲಿ ಮಹಿಳೆಯರ ಮಹಿಳೆಯರ ದುಡಿಮೆಯಲ್ಲಾದ ಬದಲಾವಣೆ, ಪಂಚವಾರ್ಷಿಕ ಹಾಗು ಅಭಿವೃದ್ಧಿ ಯೋಜನೆಯಲ್ಲಿ ಬದಲಾವಣೆ ಆಗಿದೆ.

ಭಾರತೀಯ ಮಹಿಳಾ ಚಳುವಳಿಯು, ಸರ್ಕಾರವೇ ಮಹಿಳಾ ಚಳುವಳಿಯನ್ನೂ ಕೋ ಆಪ್ಟ್ ಮಾಡಿ ಕೊಳ್ಳುವ ಪ್ರಯತ್ನದ ಬಗ್ಗೆ ಹಾಗೂ ಇತರ ಚಳುವಳಿ ಗಳಿಗೆ ಬೆಂಬಲ, ಸಹಕಾರ ನೀಡುವಾಗ, ಮಹಿಳಾ ಚಳುವಳಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳದೆ, ತನ್ನ ವೈಶಿಷ್ಟತೆಯನ್ನೂ ಉಳಿಸಿಕೊಳ್ಳುವುದರ ಬಗ್ಗೆ ಜಾಗೃತವಾಗಿದೆ. ಎಚ್ಚರಿಕೆಯಿಂದ ಇದೆ. ○

ಅನೇಕ ಅಡಚಣೆಗಳಿಂದಾಗಿ 'ಮಾನಸ' ಪತ್ರಿಕೆಯ 1995ರ ಫೆಬ್ರವರಿ ಮಾರ್ಚ್ ಸಂಚಿಕೆಗಳನ್ನು ತರಲಾಗದಿದ್ದುದಕ್ಕೆ ವಿಷಾದಿಸುತ್ತೇವೆ. ಚಂದಾದಾರರು ಸಕಾಲದಲ್ಲಿ ಚಂದಾ ನವೀಕರಿಸಿದಲ್ಲಿ ಪತ್ರಿಕೆಯನ್ನು ನಿಯತ ಕಾಲಕ್ಕೆ ತರುವುದು ನಮಗೆ ಸಾಧ್ಯವಾಗುತ್ತದೆ. ಮುಂಬರುವ ಸಂಚಿಕೆಗಳನ್ನು ಕ್ರಮವಾಗಿ ತರಲು ಶ್ರಮಿಸುತ್ತಿದ್ದೇವೆ. ಚಂದಾದಾರರು ನವೀಕರಿಸಿ ಸಹಕರಿಸಬೇಕಾಗಿ ವಿನಂತಿ.

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ



BOOK POST.

84 C.G. MANJULA
9, 3rd Cross
Markham Road
Ashok Nagar
BANGALORE- 560 025.

ವಿಳಾಸ :

" ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು-560 067